ಸಂತಾಪ ಸೂಚನೆ

(11. 10 ಎ.ಎಂ.)

ಅಧ್ಯಕ್ಷರು:- ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ನೀಲಂ ಸಂಜೀವರೆಡ್ಡಿ, ಹಾಲಿ ವಿಧಾನ ಸಭಾ ಸದಸ್ಯರಾಗಿದ್ದ ಡಾ।। ಯು. ಚಿತ್ತರಂಜನ್, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀಯುತರುಗಳಾದ: ಪಿ. ಎಫ್. ರೋಡ್ರಿಗಸ್, ಕೆ. ಜೆ. ರಾಮಸ್ವಾಮಿ, ಬಿ. ಬಸವಯ್ಯ, ಡಿ. ಟಿ. ಮಾಯಣ್ಣ, ಪಿ. ವೆಂಕಟಗಿರಿಯಪ್ಪ, ಪಿ. ಮುನಿಯಪ್ಪ, ಎ. ಎಂ. ಬಸವೇಗೌಡ, ಹೆಚ್. ಎಂ. ಮಲ್ಲಿಕಾರ್ಜುನಪ್ಪ, ವೀರಶೆಟ್ಟಿ ಕುಸನೂರು ಹಾಗೂ ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್. ಡಿ. ಗಾಂವಕರ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

೧) ಭಾರತದ ಸ್ವಾತಂತ್ರ್ಯ ಸಮರದ ಪ್ರಮುಖ ಸೇನಾನಿಗಳಲ್ಲೊಬ್ಬರಾದ ಹಾಗೂ ಮಾಜಿ ರಾಷ್ಟ್ರಪತಿ ಶ್ರೀ ನೀಲಂ ಸಂಜೀವರೆಡ್ಡಿಯವರು ಕಳೆದ ಮೇ ೩೦ ರಂದು ನಮ್ಮನ್ನಗಲಿದರೆಂದು ತಿಳಿಸಲು ನನಗೆ ದುಃಖವಾಗುತ್ತಿದೆ.

ಈ ಹಿರಿಯ ಚೇತನವನ್ನು ಸ್ಮರಿಸಿ ಕೃತಜ್ಞತೆಯನ್ನು ವ್ಯಕ್ತಪಡಿಸಿ, ಅವರು ಬಿಟ್ಟು ಹೋಗಿರುವ ಸ್ಫೂರ್ತಿ ಮತ್ತು ಪರಂಪರೆಯ ಬೆಳಕಿನಲ್ಲಿ ಮುಂದೆ ಸಾಗುವುದು ನಾವು ಮಾಡಬೇಕಾದ ಕೆಲಸವಾಗಿದೆ.

ಅಪ್ಪಟ ಗ್ರಾಮೀಣ ಹಿನ್ನೆಲೆಯಿಂದ ಪಡಿ ಮೂಡಿದ, ಸ್ವಾತಂತ್ರ್ಯ ಪೂರ್ವ ಭಾರತ ಕಂಡ, ಅಪರೂಪದ ರಾಜಕಾರಣಿಗಳಲ್ಲೊಬ್ಬರು ಶ್ರೀ ನೀಲಂ ಸಂಜೀವರೆಡ್ಡಿಯವರು. ತಮ್ಮ ರಾಜಕೀಯ ಮುತ್ಸದಿತನದಿಂದಾಗಿ, ತಮ್ಮದೇ ಆದ ಛಾಪು ಮೂಡಿಸಿದ ವಿಶಿಷ್ಟ ವ್ಯಕ್ತಿ ಶ್ರೀ ರೆಡ್ಡಿಯವರು.

ನಾಡಿನ ಭತ್ತದ ಕಣಜ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಇಲ್ಲೂರಿನಲ್ಲಿ ಕೃಷಿಯನ್ನೇ ಪ್ರಧಾನ ವೃತ್ತಿಯಾಗಿಸಿಕೊಂಡ ಕೃಷಿಕರ ಕುಟುಂಬದಲ್ಲಿ ಜನಿಸಿ, ಮದ್ರಾಸು, ಅನಂತಪುರಗಳಲ್ಲಿ ವಿದ್ಯಾಭ್ಯಾಸ ಪಡೆದ ಶ್ರೀ ನೀಲಂ ೧೯೩೧ರಲ್ಲಿ ಓದಿಗೆ ಶರಣು ಹೊಡೆದು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಕಟ್ಟಾ ರಾಷ್ಟ್ರಪ್ರೇಮಿ. ರಾಷ್ಟ್ರೀಯ ಚಳುವಳಿಯ ಹೋರಾಟದಲ್ಲಿ ಅನೇಕ ಬಾರಿ ಜೈಲುವಾಸ ಅನುಭವಿಸಿದ ಶ್ರೀ ನೀಲಂ ರವರು ಮದ್ರಾಸ್ ಶಾಸನ ಸಭೆಗೆ ೧೯೪೬ರಲ್ಲಿ ಚುನಾಯಿತರಾಗುವುದರೊಂದಿಗೆ ಆರಂಭಗೊಂಡ ಮದ್ರಾಸ್ ಸರ್ಕಾರದಲ್ಲಿ ಸಚಿವರಾಗಿ, ಆಂಧ್ರ ಪ್ರದೇಶದ ಉಪ ಮುಖ್ಯ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಲೋಕಸಭಾ ಸದಸ್ಯರಾಗಿ, ಕೇಂದ್ರ ಮಂತ್ರಿಯಾಗಿ ಅನಂತರ ರಾಷ್ಟ್ರದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸುವವರೆಗಿನ ಹೋರಾಟಮಯ ಬದುಕು ಆದರ್ಶಣೀಯವಾದುದು, ಅನುಕರಣೀಯವಾದುದು.

ಆಂಧ್ರದ ರಾಜಕಾರಣದಲ್ಲಿ ಬೀರಿದಷ್ಟೇ ಪ್ರಭಾವವನ್ನು ರಾಷ್ಟ್ರ ರಾಜಕಾರಣದಲ್ಲೂ ಬೀರಿ, ಸಕ್ರಿಯ ರಾಜಕಾರಣಕ್ಕೆ ಹೊಸದೊಂದು ಆಯಾಮ ತಂದುಕೊಟ್ಟ ಶ್ರೀ ನೀಲಂ ಸಂಜೀವರೆಡ್ಡಿಯವರು ಪರಿಕ್ರಮಿಸಿದ ಮಾರ್ಗ ಆನೆ ತುಳಿದ ಮಾರ್ಗದಂತೆ.

ನಾಡು ಕಂಡ ಅತ್ಯುತ್ತಮ ಪಾರ್ಲಿಮೆಂಟೇರಿಯನ್‌ಗಳಲ್ಲೊಬ್ಬರಾದ ಶ್ರೀ ನೀಲಂ ಲೋಕಸಭಾ ಸ್ಪೀಕರ್ ಆಗಿ ಅತ್ಯುತ್ತಮ ಕಾರ್ಯನಿರ್ವಹಿಸಿದರು. ಮೌಲ್ಯಾಧಾರಿತ ರಾಜಕಾರಣವನ್ನು ನಡೆಸಿ, ತಮ್ಮ ಬದುಕಿಗೆ ಒಂದು ಮೌಲ್ಯ ತಂದುಕೊಂಡಂತಹ ಅಪರೂಪದ ವ್ಯಕ್ತಿ.

ರಾಷ್ಟ್ರ ರಾಜಕಾರಣದಲ್ಲಿ, ನೈತಿಕತೆ ಕಡಿಮೆಯಾಗುತ್ತಿದೆ, ಹಿರಿಯರನ್ನು ಕಡೆಗಾಣಿಸಲಾಗುತ್ತಿದೆ

ಎನ್ನುವ ವಿಚಾರ ತಲೆಗೆ ಬಂದೊಡನೆ ಸಕ್ರಿಯ ರಾಜಕಾರಣದಿಂದ ಮನನೊಂದು ಹಿಂದೆ ಸರಿದ ಶ್ರೀ ನೀಲಂರವರನ್ನು ಮತ್ತೆ ರಾಜಕಾರಣಕ್ಕೆಳೆದದ್ದು ೧೯೭೭ರಲ್ಲಿ ಅಧಿಕಾರಕ್ಕೆ ಬಂದ ಜನತಾ ಪಕ್ಷ. ರಾಜಕೀಯದಿಂದ ನಿವೃತ್ತರಾಗಿ ಅನಂತಪುರದಲ್ಲಿ ನೆಲೆಸಿದ್ದ ಶ್ರೀ ಸಂಜೀವರೆಡ್ಡಿಯವರನ್ನು ರಾಷ್ಟ್ರಪತಿ ಹುದ್ದೆಯನ್ನಲಂಕರಿಸಬೇಕೆಂದು ವಿನಂತಿಸಿದ ಆತ್ಮೀಯರ ಒತ್ತಾಯಕ್ಕೆ ಮಣಿದು ೧೯೭೭ರಿಂದ ೧೯೮೨ರವರೆಗೆ ಭಾರತದ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸಿದ ಶ್ರೀ ನೀಲಂ ಸಂಜೀವರೆಡ್ಡಿ ತಮ್ಮ ಹಿತೈಷಿಗಳ ನಂಬುಗೆಯನ್ನೆಂದೂ ಹುಸಿ ಮಾಡಲಿಲ್ಲ.

೧೯೮೨ರ ನಂತರ ತಮ್ಮ ರಾಜ್ಯಕ್ಕೆ ಹಿಂತಿರುಗಿದ ಶ್ರೀ ನೀಲಂ ಅವರನ್ನು ಕರ್ನಾಟಕದಲ್ಲಿ ನೆಲೆಸುವಂತೆ ಆಹ್ವಾನಿಸಿ, ಅವರ ವಸತಿ ವ್ಯವಸ್ಥೆಯ ಜವಾಬ್ದಾರಿ ಹೊತ್ತುಕೊಂಡ ಕರ್ನಾಟಕ ಸರ್ಕಾರ, ತನ್ನ ಹಿರಿಮೆಗೊಂದು ಗರಿ ಮೂಡಿಸಿಕೊಂಡಿತು. ನಿರಂತರ ಹೋರಾಡಿದ ಹಿರಿಯ ಚೇತನಕ್ಕೊಂದು ಆಶ್ರಯ ಕಲ್ಪಿಸಿತು.

ಸುಮಾರ್ಗ ಪ್ರವರ್ತಕರಲ್ಲೊಬ್ಬರಾದ ಶ್ರೀ ನೀಲಂ ಸಂಜೀವರೆಡ್ಡಿಯವರಿಗೆ ಗೌರವ ಸಲ್ಲಿಕೆ ನಮ್ಮ ಆದ್ಯ ಕರ್ತವ್ಯ.

೨) ಹತ್ತನೇ ವಿಧಾನ ಸಭೆಯ ಹಾಲಿ ಸದಸ್ಯರಾಗಿದ್ದ ಡಾ॥ ಯು. ಚಿತ್ತರಂಜನ್ ಅವರು ೧೯೯೬ನೇ ಏಪ್ರಿಲ್ ೧೦ರಂದು ಅವರ ಮನೆಯಲ್ಲಿ ಹಂತಕರ ಗುಂಡಿನೇಟಿಗೆ ಬಲಿಯಾದರು.

ಭಟ್ಕಳ ವಿಧಾನ ಸಭಾ ಕ್ಷೇತ್ರದಿಂದ ೧೯೯೪ರಲ್ಲಿ ಹತ್ತನೇ ವಿಧಾನ ಸಭೆಗೆ ಆಯ್ಕೆಯಾಗಿದ್ದ ಶ್ರೀಯುತರು ವೈದ್ಯರಾಗಿ ಕಾರ್ಯನಿರ್ವಹಿಸಿದ್ದು, ಭಟ್ಕಳ ಪುರಸಭೆಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಸಾಮಾಜಿಕ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅಪಾರ ಜನಪ್ರಿಯತೆ ಗಳಿಸಿದ್ದ ಶ್ರೀಯುತರು ಮೃದು ಸ್ವಭಾವದವರಾಗಿದ್ದರು.

೩) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ. ಎಫ್. ರೋಡ್ರಿಗಸ್ ಅವರು ದಿನಾಂಕ ೧೨-೦೩-೧೯೯೬ರಂದು ನಿಧನರಾದರು. 1978ರಲ್ಲಿ ಮಂಗಳೂರು ಕ್ಷೇತ್ರದಿಂದ ಆರನೇ ವಿಧಾನ ಸಭೆಗೆ ಆಯ್ಕೆಯಾಗಿದ್ದ ಶ್ರೀಯುತರು ಶ್ರೀ ದೇವರಾಜ ಅರಸು ಅವರ ಮಂತ್ರಿ ಮಂಡಲದಲ್ಲಿ ಸಚಿವರಾಗಿದ್ದು, ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ, ವಕೀಲರ ಸಂಘದ ಸದಸ್ಯರಾಗಿ, ದಕ್ಷಿಣ ಕನ್ನಡ ಜಿಲ್ಲಾ ಬಸ್ಸು ಮಾಲೀಕರ ಸಂಘದ ಅಧ್ಯಕ್ಷರಾಗಿ, ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಲಾ ಕಾಲೇಜಿನಲ್ಲಿ ಉಪನ್ಯಾಸಕರಾಗಿಯೂ ಸಹ ಸೇವೆಯನ್ನು ಸಲ್ಲಿಸಿದ್ದರು.

೪) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ. ಜಿ. ರಾಮಸ್ವಾಮಿ ಅವರು ದಿನಾಂಕ ೨೩-೩-೧೯೯೬ರಂದು ನಿಧನರಾದರು. ೧೯೮೫ರಲ್ಲಿ ಬನ್ನೂರು ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ಹಲವಾರು ಸಹಕಾರಿ, ಕೃಷಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಅಪಾರವಾಗಿ ಸೇವೆ ಸಲ್ಲಿಸಿದ್ದರು.

೫) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ. ಬಸವಯ್ಯ ಅವರು ದಿನಾಂಕ ೫-೪-೧೯೯೬ರಂದು ನಿಧನರಾದರು. ೧೯೬೨ ರಿಂದ ೬೭, ೧೯೭೭ ರಿಂದ ೭೧, ೧೯೮೩ ರಿಂದ ೮೪ ಮತ್ತು ೧೯೮೫ರಿಂದ ೮೯ರ ವರೆಗೆ ಕೊಳ್ಳೇಗಾಲ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದಾರೆ. ಶ್ರೀಯುತರು ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷರಾಗಿ ಹಾಗೂ ಬೆಂಗಳೂರು ನಗರಾಭಿವೃದ್ಧಿ

ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

೬) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಡಿ.ಟಿ. ಮಾಯಣ್ಣ ಅವರು ದಿನಾಂಕ ೯-೪-೧೯೯೬ರಂದು ನಿಧನರಾದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಶ್ರೀಯುತರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಕುಣಿಗಲ್ ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿ, ಕರ್ನಾಟಕ ಪಂಚಾಯ್ತಿ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ೧೯೭೮ರಲ್ಲಿ ಹುಲಿಯೂರುದುರ್ಗ ಕ್ಷೇತ್ರದಿಂದ ಆರನೇ ವಿಧಾನ ಸಭೆಗೆ ಆಯ್ಕೆ ಆಗಿದ್ದರು.

೭) ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಪಿ.ವೆಂಕಟಗಿರಿಯಪ್ಪ ಅವರು ದಿನಾಂಕ೯-೪-೧೯೯೬ರಂದು ನಿಧನರಾದರು. ೧೯೬೨ರಿಂದ೬೭ ಹಾಗೂ ೧೯೬೭ರಿಂದ ೭೧ ರವರೆಗೆ ಕೋಲಾರ ಕ್ಷೇತ್ರದಿಂದ ವಿಧಾನ ಸಭೆಯನ್ನು ಪ್ರತಿನಿಧಿಸಿದ್ದ ಶ್ರೀಯುತರು ೧೯೮೮ರಿಂದ೯೪ ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ರೈತರ ನಾಯಕರಾಗಿ ಸೇವೆ ಸಲ್ಲಿಸಿದ್ದರು.

೪) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಿ.ಮುನಿಯಪ್ಪ ಅವರು ದಿನಾಂಕ ೩೦-೪-೧೯೯೬ರಂದು ನಿಧನರಾದರು. ೧೯೭೨ರಲ್ಲಿ ಮುಳಬಾಗಿಲು ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ಸಮಾಜ ಸೇವಕರಾಗಿ, ಹರಿಜನರ ಅಭಿವೃದ್ಧಿಗೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾಗಿ ದುಡಿದಿದ್ದರು.

೯) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎ.ಎಂ. ಬಸವೇಗೌಡ ಅವರು ದಿನಾಂಕ ೩೦-೪-೧೯೯೬ರಂದು ನಿಧನರಾದರು. ಎರಡನೇ ವಿಧಾನ ಸಭೆಗೆ ಚಿಕ್ಕಮಗಳೂರು ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ಕಾಫಿ ಮಂಡಳಿಯ ಸದಸ್ಯರಾಗಿ ಹಾಗೂ ಇಂಡಿಯನ್ ಪ್ಲಾಂಟರ್ಸ್ ಅಸೋಸಿಯೇಷನ್ನಿನ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

೧೦) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಹೆಚ್.ಎಂ. ಮಲ್ಲಿಕಾರ್ಜುನಪ್ಪ ಅವರು ದಿನಾಂಕ ೫-೬-೧೯೯೬ರಂದು ನಿಧನರಾದರು. ಶ್ರೀಯುತರು ೧೯೪೫ರಿಂದ ೪೯ರ ಅವಧಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು ಹಾಗೂ ೧೯೭೮ರಲ್ಲಿ ಆರನೇ ವಿಧಾನ ಸಭೆಗೆ ತರೀಕೆರೆ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಮೈಸೂರು ವಿಶ್ವವಿದ್ಯಾಲಯದ ಸೆನೆಟ್‌ನ ಸದಸ್ಯರಾಗಿ, ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿ, ಚಿಕ್ಕಮಗಳೂರು ಜಿಲ್ಲಾ ಬೋರ್ಡಿನ ಸದಸ್ಯರಾಗಿ, ತರೀಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಹಾಗೂ ತರೀಕೆರೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದರು.

೧೧) ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವೀರಶೆಟ್ಟಿ ಕುಸನೂರು ಅವರು ದಿನಾಂಕ ೨೧-೫-೧೯೯೬ರಂದು ನಿಧನರಾದರು. ಎರಡನೇ ವಿಧಾನ ಸಭೆಗೆ ಕಾರವಾರ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು ೧೯೬೨ರಿಂದ೬೮, ೧೯೬೮ರಿಂದ೭೪ ಹಾಗೂ ೧೯೯೦ರಿಂದ೯೬ರ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ೩೦-೭-೧೯೯೬ರಿಂದ೧೩-೫-೧೯೯೬ರ ವರೆಗೆ ವಿಧಾನ ಪರಿಷತ್ತಿನ ಉಪ ಸಭಾಪತಿಗಳಾಗಿದ್ದ ಶ್ರೀಯುತರು ೧೦-೪-೭೨ ರಿಂದ ೧೩-೫-೧೯೭೪ರವರೆಗೆ ವಿಧಾನ ಪರಿಷತ್ತಿನ ಸಭಾಪತಿಯವರಾಗಿಯೂ ಕಾರ್ಯನಿರ್ವಹಿಸಿದ್ದರು.

ಈಗ ಮೃತರ ಗೌರವಾರ್ಥ ಮಾನ್ಯ ಸಭಾನಾಯಕರು ಎರಡು ನಿಮಿಷಗಳ ಕಾಲ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು.

★ **ಶ್ರೀ ಜೆ.ಹೆಚ್.ಪಟೀಲ್(ಮುಖ್ಯ ಮಂತ್ರಿಗಳು):-** ಮಾನ್ಯ ಅಧ್ಯಕ್ಷರೆ, ಮಾನ್ಯ ನೀಲಂ ಸಂಜೀವರೆಡ್ಡಿಯವರ ಬಗ್ಗೆ ಹೇಳಿದಂತಹ ಪ್ರತಿಯೊಂದು ಮಾತು ಸತ್ಯವಾಗಿದೆ. ನಾನು ಲೋಕಸಭಾ ಸದಸ್ಯನಾಗಿದ್ದಾಗ ಅವರ ನೇರ ಪರಿಚಯವಾಯಿತು. ನಾನು ಅವರನ್ನು ಆಗಾಗ ನೆನಪಿಸಿಕೊಳ್ಳುತ್ತೇನೆ, ಏಕೆಂದರೆ ನಾನು ಮೊದಲನೆಯ ಸಲ ಲೋಕಸಭೆಯಲ್ಲಿ ಕನ್ನಡದಲ್ಲಿ ಮಾತನಾಡುವಾಗ ಬಹಳ ದೊಡ್ಡ ಪ್ರತಿಭಟನೆ, ಕೋಲಾಹಲವಾಯಿತು. ಕನ್ನಡದಲ್ಲಿ ಮಾತನಾಡಬಾರದು. ಹಾಗೆ ಏನಾದರೂ ಮಾತನಾಡಬೇಕೆಂದರೆ ಮೊದಲು ಮಾತನಾಡುವ ವಿಷಯದ ಬಗ್ಗೆ ಬರವಣಿಗೆಯಲ್ಲಿ ಕೊಟ್ಟು ನಂತರ ಮಾತನಾಡಬೇಕೆಂಬ ನಿಯಮವಿದೆ ಎಂದು ಹೇಳಿದರು. ಆದರೂ ನಾನು ಇದು ರಾಜ್ಯಾಂಗ ಬದ್ಧವಾದ ಹಕ್ಕು ಎಂದು ಹೇಳಿದೆ. ಆ ಸಂದರ್ಭದಲ್ಲಿ ಲೋಕಸಭಾಧ್ಯಕ್ಷರಾಗಿ ಅದನ್ನು ಎತ್ತಿ ಹಿಡಿದರು. ರಾಜ್ಯಾಂಗದ ಷೆಡ್ಯೂಲ್‌ನಲ್ಲಿರುವಂತಹ ೧೫ ಭಾಷೆಗಳಲ್ಲಿ ಮಾತನಾಡಬಹುದೆಂದು ಲೋಕಸಭೆಯಲ್ಲಿ ಒಂದು ಹೊಸ ಪಾಠ ಶುರುವಾಯಿತು. ಅದಕ್ಕೋಸ್ಕರ ಅವರನ್ನು ಮತ್ತು ಈ ಘಟನೆಯನ್ನು ಎಂದೂ ಮರೆಯುವುದಕ್ಕಾಗುವುದಿಲ್ಲ. ಆದರೆ ಅವರು ನನಗೆ ನೀವು ಮೊದಲೆ ತಿಳಿಸಿದ್ದರೆ ತರ್ಜುಮೆಗೆ ಅವಕಾಶ ಮಾಡುತ್ತಿದ್ದೆವು ಎಂದು ಹೇಳಿದರು. ಅದೇ ರೀತಿ ಅವರ ಆರೋಗ್ಯ ಕೆಟ್ಟಾಗ ನಾನು ಅವರ ಹತ್ತಿರ ಒಂದೆರಡು ಬಾರಿ ಹೋಗಿದ್ದೆ, ಅವರ ಆರೋಗ್ಯದ ಸ್ಥಿತಿ ಎಂತಹ ಸ್ಥಿತಿಯಲ್ಲಿ ಇದ್ದರೂ ದೇಶದ ಬಗ್ಗೆ, ರಾಜಕೀಯದ ಬಗ್ಗೆ ತೀವ್ರವಾದಂತಹ ಕಳವಳವನ್ನು ವ್ಯಕ್ತಪಡಿಸುತ್ತಿದ್ದರು. ನಮ್ಮ ಹಿರಿಯ ಹೋರಾಟಗಾರರಲ್ಲಿ ಅವರು ಒಬ್ಬರಾಗಿದ್ದರು. ಪೂಜ್ಯ ಮಹಾತ್ಮ ಗಾಂಧಿಯವರ ಪ್ರಭಾವದಲ್ಲಿ ಬಂದಂಥವರು ಒಬ್ಬೊಬ್ಬರಾಗಿ ನಿರ್ಗಮಿಸುತ್ತಿದ್ದಾರೆ. ತಾವು ವ್ಯಕ್ತಪಡಿಸಿದ ಸಂತಾಪ ಸೂಚನೆಯೊಡನೆ ನಾನು ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಅದೇ ರೀತಿಯಲ್ಲಿ ಕೆಲವರು ಬಹಳ ಸ್ನೇಹಿತರಾಗಿದ್ದಂತಹವರು, ಕೆಲವರು ಸಮಾಜವಾದಿ ಚಳುವಳಿಯಲ್ಲಿದ್ದಂತಹವರು ಇದ್ದಾರೆ. ಮೊದಲನೆಯದಾಗಿ ಡಾ। ಯು.ಚಿತ್ತರಂಜನ್‌ರವರ ಜೊತೆ ಸ್ನೇಹವಿಲ್ಲದಿದ್ದರೂ ಅವರು ಸಭೆಗಳಲ್ಲಿ ಭಾಗವಹಿಸಿದ್ದಾಗ ಅವರ ಕಾರ್ಯನಿರ್ವಹಣೆಯನ್ನು ನಾನು ಮೆಚ್ಚುತ್ತೇನೆ. ಅವರು ಯಾವುದೇ ವಿಷಯವನ್ನು ಸಭೆಯಲ್ಲಿ ಮಾತನಾಡುವಾಗ ಏನೋ ಮಾತನಾಡಬೇಕೆಂದು ಮಾತನಾಡುತ್ತಿರಲಿಲ್ಲ. ವಿಷಯವನ್ನು ಅಧಿಕೃತವಾಗಿ ತಿಳಿದುಕೊಂಡು ಸಂಪೂರ್ಣ ಪ್ರಜ್ಞೆಯಿಂದ ಮಾತನಾಡುತ್ತಿದ್ದರು. ಅವರ ಸಾವು ಈ ಸದನಕ್ಕೆ ತುಂಬಲಾರದಂತಹ ನಷ್ಟವೆಂದು ನಾನು ಭಾವಿಸುತ್ತೇನೆ ಮತ್ತು ಅವರ ಕುಟುಂಬಕ್ಕೆ ಸಂತಾಪವನ್ನು ತಿಳಿಸುತ್ತೇನೆ. ಅದೇ ರೀತಿ ಮಾನ್ಯ ಸದಸ್ಯರಾದಂತಹ ಶ್ರೀ ಕೆ.ಜೆ.ರಾಮಸ್ವಾಮಿಯವರಿಗೂ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಶ್ರೀ ಬಿ.ಬಸವಯ್ಯನವರು ನಮ್ಮ ಪಕ್ಷದಲ್ಲೇ ಇದ್ದಂಥವರು, ಬಹಳ ಆತ್ಮೀಯ ಗೆಳೆಯರು ಆಗಿದ್ದರು. ಒಬ್ಬ ಹಿರಿಯ ದಲಿತ ವರ್ಗದ ಮುಖಂಡರೂ ಆಗಿದ್ದರು. ಡಾ। ಅಂಬೇಡ್ಕರ್‌ರವರ ವಿಚಾರವನ್ನು ಬಹಳ ಚೆನ್ನಾಗಿ ಪ್ರತಿಪಾದನೆ ಮಾಡಿದಂತಹ ಇವರು ನಮ್ಮನ್ನು ಅಗಲಿ ಹೋದದ್ದು, ದುಃಖದ ಸಂಗತಿಯಾಗಿದೆ. ಅದೇ ರೀತಿಯಲ್ಲಿ ಶ್ರೀ ಡಿ.ಟಿ.ಮಾಯಣ್ಣನವರು ಪಾರ್ಟಿಯ ಮುಖಂಡರಾಗಿದ್ದರು. ಇವರು ಬಹಳ ಸಂಪನ್ನರಾದಂತಹ ಮನುಷ್ಯರಾಗಿದ್ದರು. ಇವರು ಬೇರೆಯವರಲ್ಲಿ ಹಾಗೆ ಹಠ ಮಾಡುತ್ತಾ ಜಗಳಾಡುವಂತಹ ಪ್ರವೃತ್ತಿ ಇರಲಿಲ್ಲ. ಅದೇ ರೀತಿ ಮಾನ್ಯ

ಪಿ.ವೆಂಕಟಗಿರಿಯಪ್ಪನವರು ಶ್ರೀ ಗೋಪಾಲಗೌಡರು ಇದ್ದಾಗ ನಾವು ಅವರು ಒಟ್ಟಾಗಿ ಕೆಲಸ ಮಾಡಿದ್ದು ಉಂಟು, ನಂತರ ಅವರು ರಾಜಕೀಯವಾಗಿ ನಿಲುವನ್ನು ತೆಗೆದುಕೊಂಡರು. ರೈತರ ವಿಚಾರವಾಗಿ ಯಾವುದೇ ಸಂದರ್ಭದಲ್ಲಿಯಾದರೂ ಬಹಳ ಸಹಕಾರ ಮನೋಭಾವವನ್ನು ತಳೆಯುತ್ತಿದ್ದರು. ಹಾಗೆ ಶ್ರೀ ಪಿ.ಮುನಿಯಪ್ಪನವರ ಬಗ್ಗೆಯು ಸಂತಾಪ ವ್ಯಕ್ತಪಡಿಸುತ್ತೇನೆ. ಶ್ರೀ ಎ.ಎಂ. ಬಸವೇಗೌಡರು ಸಹ ಸ್ನೇಹಿತರಾಗಿದ್ದರು. ಅವರು ರಾಜಕೀಯವಾಗಿ ನಮ್ಮ ಹತ್ತಿರವಿರದಿದ್ದರೂ ಬೇರೆ ರೂಪದಲ್ಲಿ ನಮ್ಮ ಅವರ ಸ್ನೇಹ ಬಹಳ ಗಾಢವಾಗಿತ್ತು. ಶ್ರೀ ಹೆಚ್.ಎಂ.ಮಲ್ಲಿಕಾರ್ಜುನಪ್ಪನವರು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾಗಿದ್ದಾಗಿನಿಂದಲೂ ನನಗೆ ಚೆನ್ನಾಗಿ ಗೊತ್ತು. ವಿಧಾನ ಸಭೆಯ ಸದಸ್ಯರಾಗಿದ್ದಾಗ ಬಹಳ ಹತ್ತಿರವಾದ ಸಂಬಂಧವಿತ್ತು. ಅವರ ನಿಧನಕ್ಕೆ ನಾನು ಸಂತಾಪವನ್ನು ಸೂಚಿಸುತ್ತೇನೆ. ಶ್ರೀ ವೀರಶೆಟ್ಟಿ ಕುಸನೂರುರವರು ಸಹಕಾರಿ ಚಳುವಳಿಯ ಮುಂಚೂಣಿಯಲ್ಲಿದ್ದಂತಹವರು ಬಹಳ ಸ್ನೇಹಪ್ರಿಯರು, ಹಾಗಾಗಿ ಅವರೊಡನೆ ಕೆಲವು ರಸನಿಮಿಷಗಳು ಕಳೆದಿದ್ದು ಉಂಟು, ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತೇನೆ. ಶ್ರೀ ಎಸ್.ಡಿ.ಗಾಂವಕರ್‌ರವರು ಒಂದು ಕಾಲದಲ್ಲಿ ನಮ್ಮ ಪಕ್ಷದ ಸದಸ್ಯರೇಆಗಿದ್ದರು, ಏನೇ ರಾಜಕೀಯ ಭಿನ್ನಾಭಿಪ್ರಾಯವಿದ್ದರೂ ಬಹಳ ಸಜ್ಜನೀಯ ವ್ಯಕ್ತಿಗಳು. ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತೇನೆ. ಈ ವಿಷಯವಾಗಿ ತಾವು ಹೇಳಿದಂತಹ ಎಲ್ಲಾ ಮಾತುಗಳಿಗೂ ನಾನು ಸಮರ್ಥನೆ ನೀಡುತ್ತಾ, ಈ ಸದನದ ನಾಯಕನಾಗಿ ಮೃತರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ ಈ ಸಂತಾಪ ಸೂಚನೆಯನ್ನು ಸಮರ್ಥಿಸುತ್ತೇನೆ.

★ **ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಅಧ್ಯಕ್ಷರೆ, ತಾವು ಸಂತಾಪ ಸೂಚನಾ ನಿರ್ಣಯವನ್ನು ಏನು ತೆಗೆದುಕೊಂಡಿದ್ದೀರಿ, ಅದಕ್ಕೆ ನನ್ನ ಸಂಪೂರ್ಣ ಅನುಮೋದನೆಯನ್ನು ನೀಡುತ್ತೇನೆ. ಮಾಜಿ ರಾಷ್ಟ್ರಪತಿಗಳಾದ ಶ್ರೀ ನೀಲಂ ಸಂಜೀವರೆಡ್ಡಿಯವರಂಥ ವ್ಯಕ್ತಿಗಳನ್ನು ರಾಷ್ಟ್ರ ಕಂಡಂತಹ ಕೆಲವೇ ಮುತ್ಸದ್ದಿಗಳಲ್ಲಿ ಇವರು ಒಬ್ಬರಾಗಿದ್ದರು. ಅನುಭವಿ ಆಡಳಿತಗಾರರು ಆಗಿದ್ದರು. ಇವರು ಎರಡು ಬಾರಿ ೧೯೫೫ ಮತ್ತು ೧೯೬೨ರಲ್ಲಿ ಆಂಧ್ರಪ್ರದೇಶದ ಮುಖ್ಯ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ ಉದ್ದೇಶದಿಂದ ಎರಡು ಬಾರಿ ಅವರು ರಾಜೀನಾಮೆಯನ್ನು ಕೊಡುವುದಕ್ಕೆ ಹಿಂದುಮುಂದು ನೋಡಲಿಲ್ಲ. ಭಾರತ ಸಂವಿಧಾನದ ಒಂದು ಸಮಿತಿಯ ಸದಸ್ಯರು ಆಗಿದ್ದರು. ೧೯೬೭ರಲ್ಲಿ ಲೋಕಸಭಾ ಸ್ಪೀಕರ್ ಆಗಿದ್ದು ನಂತರ ರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆಯಾದಂತಹ ಸಂದರ್ಭದಲ್ಲಿ ಆತ್ಮಸಾಕ್ಷಿಯಾಗಿ ಮತ ಹಾಕುವಂತಹ ಸಂದರ್ಭ ಬಂದಾಗ ಅವರು ಚುನಾವಣೆಯಲ್ಲಿ ಪರಾಭವಗೊಂಡರೂ ೧೯೭೭ರಲ್ಲಿ ರಾಷ್ಟ್ರಪತಿಯಾಗಿ ಅವಿರೋಧವಾಗಿ ಆಯ್ಕೆಯಾದರು. ಅವರು ತಮ್ಮ ನಿವೃತ್ತಿ ಜೀವನವನ್ನು ೧೯೮೮ರಿಂದ ಬೆಂಗಳೂರಿನಲ್ಲೆ ಕಳೆದಂತಹವರು, ಅನೇಕ ಪ್ರಮುಖ ಕಾರ್ಯಕ್ರಮಗಳು ಯಾವುದೇ ಆದರೂ ಆ ಸಭೆಯಲ್ಲಿ ಅವರ ಉಪಸ್ಥಿತಿ ಎದ್ದು ಕಾಣುತ್ತಿತ್ತು. ಅವರು ತಮ್ಮ ಜೀವಿತ ಅವಧಿಯ ಕೊನೆಯವರೆಗೂ ದೇಶದ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡಿದ್ದಂತಹವರು. ಅಂತಹ ವ್ಯಕ್ತಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಇನ್ನು ನಮ್ಮ ಪಕ್ಷದ ಶಾಸಕರಾದ ಡಾ। ಯು.ಚಿತ್ತರಂಜನ್‌ರವರು ಭಟ್ಕಳ ಕ್ಷೇತ್ರದಿಂದ ಆಯ್ಕೆಯಾದಂತಹ ಇವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆಂದರೆ ನಮಗೆ ನಂಬುವುದಕ್ಕೆ ಸಾಧ್ಯವಿಲ್ಲ. ಇವರು ಒಬ್ಬ ಅಜಾತ ಶತ್ರುವಾಗಿದ್ದರು. ಅತ್ಯಂತ ಸಜ್ಜನ, ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಜನರ ಕಷ್ಟಕಾರ್ಪಣ್ಯಗಳಿಗೆ

ಸ್ಪಂದಿಸುವಂತಹವರು. ಇವರು ವೃತ್ತಿಯಲ್ಲಿ ಡಾಕ್ಟರ್ ಆಗಿ ಸಾಮಾಜಿಕ ಜೀವನದಲ್ಲಿ ಯಾರೇ ಬಂದರೂ ಭೇದಭಾವವಿಲ್ಲದೆ ಅವರ ಸೇವೆಯನ್ನು ಮಾಡಿದಂಥವರು. ಇವರು ೧೦-೪-೧೯೯೬ರಂದು ಲೋಕಸಭಾ ಚುನಾವಣೆ ಪ್ರಚಾರವನ್ನು ಮುಗಿಸಿ ರಾತ್ರಿ ೧೦.೦೦ ಗಂಟೆಗೆ ಮನೆಯಲ್ಲಿ ಟಿ.ವಿ.ಯನ್ನು ಹಾಕುವಂತಹ ಸಂದರ್ಭದಲ್ಲಿ ಹಂತಕನ ಗುಂಡಿಗೆ ಬಲಿಯಾದರು. ಈಗ ಈ ವಿಷಯವನ್ನು ಪ್ರಸ್ತಾಪ ಮಾಡುವಂತಹ ಸಮಯವಲ್ಲ. ಇದನ್ನು ಬೇರೆ ಸಂದರ್ಭದಲ್ಲಿ ಅಂದರೆ ಡಾ। ಚಿತ್ತರಂಜನ್ ರವರ ಕೊಲೆಯ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಅವರು ರಕ್ಷಣೆಗಾಗಿ ಸರ್ಕಾರವನ್ನು ಬೇಡಿದ್ದರು. ಅವರ ಪರಿಸ್ಥಿತಿ ಏನು ಎಂಬುದು ಸರ್ಕಾರಕ್ಕೆ ಗೊತ್ತಿತ್ತು. ಆಗ ಸೂಕ್ತ ಕ್ರಮ ತೆಗೆದುಕೊಂಡಿದ್ದರೆ ಅವರನ್ನು ಉಳಿಸಿಕೊಳ್ಳಬಹುದಾಗಿತ್ತು. ಅಂತಹ ಕಳಕಳಿಯನ್ನು ಇಟ್ಟುಕೊಂಡಿದ್ದಂತಹ ಯುವಕನನ್ನು, ಇಲ್ಲಿ ಶಾಸಕನಾಗಿ ಸೇವೆ ಸಲ್ಲಿಸಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅದೇ ರೀತಿ ನಾವು ಇಲ್ಲಿ ಅನೇಕ ಶಾಸಕರನ್ನು ಕಳೆದುಕೊಂಡಿದ್ದೇವೆ. ಶ್ರೀ ಪಿ.ಎಫ್.ರೋಡ್ರಿಗಸ್, ಶ್ರೀ ಕೆ.ಜೆ.ರಾಮಸ್ವಾಮಿ, ಶ್ರೀ ಬಿ.ಬಸವಯ್ಯ, ಶ್ರೀ ಡಿ.ಟಿ.ಮಾಯಣ್ಣ, ಶ್ರೀ ಪಿ.ವೆಂಕಟಗಿರಿಯಪ್ಪ, ಶ್ರೀ ಮುನಿಯಪ್ಪ, ಶ್ರೀ ಎ.ಎಂ. ಬಸವೇಗೌಡ, ಶ್ರೀ ಹೆಚ್.ಎಂ.ಮಲ್ಲಿಕಾರ್ಜುನಪ್ಪ, ಶ್ರೀ ವೀರಶೆಟ್ಟಿ ಕುಸನೂರು ಮತ್ತು ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದಂತಹ ಶ್ರೀ ಎಸ್.ಡಿ.ಗಾಂವಕರ್ ಅವರು ವಿಧಾನ ಪರಿಷತ್ತಿನ ಮಾಜಿ ಸಭಾಪತಿಯಾಗಿಯೂ, ವೃತ್ತಿಯಲ್ಲಿ ವಕೀಲರು, ಕಾರವಾರ ಕ್ಷೇತ್ರದ ಮುನಿಸಿಪಾಲಿಟಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದಂತಹ ಮತ್ತು ಕೊಂಕಣ, ಮರಾಠಿ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಸೇವೆ ಮಾಡಿದಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ಮತ್ತು ತಮ್ಮ ಗಮನಕ್ಕೆ ಒಂದು ಸಂಗತಿಯನ್ನು ತರಬಯಸುತ್ತೇನೆ. ಇವತ್ತು ಡಾ। ಚಿತ್ತರಂಜನ್ ರವರನ್ನು ಮತ್ತು ಅನೇಕ ಜನ ಶಾಸಕರನ್ನು ನಾವು ಕಳೆದುಕೊಂಡಿದ್ದೇವೆ. ಈ ರೀತಿ ಜೀವ ತೆತ್ತ ವ್ಯಕ್ತಿಗಳ ಕುಟುಂಬ ವರ್ಗದವರ ಬಗ್ಗೆ ಯೋಚನೆ ಮಾಡುವಂತಹ ಅಗತ್ಯವಿದೆ ಎಂದು ನಾನು ಅಂದುಕೊಂಡಿದ್ದೇನೆ. ಮನೆ ಮಠ ಸ್ವಂತಕ್ಕೆ ಏನು ಇಲ್ಲದೆ ಎಲ್ಲವನ್ನು ಕಳೆದುಕೊಂಡಂಥವರಿಗೆ ಏನಾದರೂ ವ್ಯವಸ್ಥೆ ಮಾಡುವಂಥಾದ್ದು ಅಥವಾ ಶಾಸಕರ ನಿಧಿ ಎಂದು ಏನಾದರೂ ಮಾಡುವಂಥಾದ್ದು ಅವಶ್ಯಕತೆವಿದೆ. ಉದಾಹರಣೆಗೆ ಡಾ। ಯು.ಚಿತ್ತರಂಜನ್ ರವರು ಬ್ಯಾಂಕ್ ಸಾಲವನ್ನು ಬಿಟ್ಟು ಹೋದರು. ಈಗ ಅವರ ಮನೆಯನ್ನು ನೋಡುವವರು, ಕೇಳುವವರು ಯಾರು ಇಲ್ಲದಂಥ ಪರಿಸ್ಥಿತಿ ಯಲ್ಲಿದ್ದಾರೆ. ಅವರು ಬ್ಯಾಂಕ್ ಸಾಲ ಮಾಡಿ ಬಿಟ್ಟು ಹೋದಂಥ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿಯಲ್ಲಿ ಈ ರೀತಿ ಸಾಮಾಜಿಕ ಸೇವೆಯನ್ನು ಮಾಡುವಂತಹ ಇವರುಎಲ್ಲವನ್ನು ಕಳೆದುಕೊಂಡಂತಹ ವ್ಯಕ್ತಿಗಳಿಗೆ ಯಾವುದಾದರೂ ಒಂದು ರೀತಿಯ ಪರಿಹಾರವನ್ನು ಅವರ ಮನೆತನವನ್ನು ಉಳಿಸುವಂತಹ ದಿಕ್ಕಿನಲ್ಲಿ ಸರ್ಕಾರ ಏನಾದರೂ ಒಂದು ನಿಧಿ ಇಟ್ಟು ಆ ರೀತಿಯಲ್ಲಿ ಸವಲತ್ತುಗಳನ್ನು ಕೊಟ್ಟು ಅವರ ಕುಟುಂಬದವರು ಉಳಿಯುವಂತಹ ವ್ಯವಸ್ಥೆಯಾಗಬೇಕು, ಇವರೆಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ ಎಂದು ಪ್ರಾರ್ಥನೆ ಮಾಡುತ್ತಾ, ಅವರ ಕುಟುಂಬ ವರ್ಗದವರಿಗೆ ದುಃಖ ಭರಿಸುವಂತಹ ಶಕ್ತಿಯನ್ನು, ನಷ್ಟವನ್ನು ತುಂಬುವಂತಹ ಶಕ್ತಿಯನ್ನು ಆ ಭಗವಂತನು ನೀಡಲಿ ಎಂದು ಹೇಳುತ್ತಾ, ತಾವು ಮತ್ತು ಸಭಾನಾಯಕರು ಏನು ಮಾತನ್ನು ಹೇಳಿದ್ದೀರಿ, ಅದಕ್ಕೆ ನನ್ನ ಅನುಮೋದನೆ ನೀಡುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

★ **ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್):-** ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದಂಥ ಈ ಸಂತಾಪ ಸೂಚನೆಗೆ ನಾನು ಕೂಡ ಬೆಂಬಲಿಸುತ್ತಾ ಇಂದಿನ ದಿವಸ ತಾವು ಪ್ರಸ್ತಾಪ ಮಾಡಿದಂಥ ಮೊದಲನೆ ಸಂತಾಪ ಸೂಚನೆಯಲ್ಲಿ ಇರುವಂತೆ ನಮ್ಮ ದೇಶದ ಮಾಜಿ ರಾಷ್ಟ್ರಪತಿಗಳು ಮತ್ತು ಮಾಜಿ ಮುಖ್ಯ ಮಂತ್ರಿಗಳಾದ ಶ್ರೀಮಾನ ನೀಲಂ ಸಂಜೀವರೆಡ್ಡಿಯವರು ನಮ್ಮನ್ನು ಅಗಲಿದ್ದಾರೆ. ಬಹುಶಃ ಅವರು ಬೆಂಗಳೂರಿನ ನಿವಾಸಿಗಳಾಗಿ ಬೆಂಗಳೂರಿನಲ್ಲಿ ಜೀವನದ ಕೊನೆಯ ಉಸಿರನ್ನೆಳೆದರು. ಸಾವಿರದ ಒಂಭೈನೂರ ಅರವತ್ತೊಂಭತ್ತರಲ್ಲಿ ಬಹುಶಃ ಅವರು ಚುನಾವಣೆಗೆ ನಿಂತು ಆ ಒಂದು ಅಧ್ಯಕ್ಷೀಯ ಚುನಾವಣೆಯಲ್ಲಿ ಸೋತು ಹೋಗಿದ್ದರೆ ಈ ದೇಶದ ರಾಜಕಾರಣದಲ್ಲಿ ಇವತ್ತು ನಾವು ಏನು ವ್ಯತ್ಯಾಸವನ್ನು ಕಾಣುತ್ತಿದ್ದೇವೆ ಬಹುಶಃ ಅದು ಆಗುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಸಾವಿರ ಒಂಭೈನೂರ ಅರವತ್ತೊಂಭತ್ತರ ಪಕ್ಷದ ವಿಭಜನೆಯೇ ಕಾರಣವಾಗಿ ಬಹಳಷ್ಟು ಯುವಕರಿಗೆ, ಒಂದು ಹೊಸ ಪಕ್ಷ ತಯಾರಾದ ಮೇಲೆ ಅದರಲ್ಲಿ ಪ್ರತಿನಿಧಿತ್ವ ಮಾಡತಕ್ಕಂಥ ಒಂದು ಅವಕಾಶ ಕೂಡ ಸಿಕ್ಕಿತು. ಅಂದರೆ ನೇರ ನುಡಿಗೆ ಮತ್ತು ಸರಳ ಮಾತಿಗೆ ಹೆಸರಾದಂಥ ನೀಲಂ ಸಂಜೀವರೆಡ್ಡಿಯವರು ಯಾವುದೇ ಒಂದು ಪಕ್ಷದಿಂದ ಅಭ್ಯರ್ಥಿಯನ್ನು ನಿಲ್ಲಿಸಿದರೆ ಆ ಕಡೆಯಿಂದಲೇ ನಿಲ್ಲುತ್ತೇನೆಂದು ನಿಂತು ಕೊನೆಯವರೆಗೆ ಹೋರಾಟ ಮಾಡಿ,ಸೋತ ಮೇಲೂ ಕೂಡ ಅದೇ ಪಕ್ಷದಲ್ಲಿ ಇದ್ದು ಪುನಃ ಆ ಹಠವನ್ನು ಸಾವಿರದ ಒಂಭೈನೂರ ಎಪ್ಪತ್ತೇಳರಲ್ಲಿ ಸಾಧಿಸಿ ಈ ದೇಶದ ರಾಷ್ಟ್ರಪತಿಗಳಾಗಿ ಅವರು ಸಾವಿರದ ಒಂಭೈನೂರ ಎಪ್ಪತ್ತೇಳರಿಂದ ಎಂಭತ್ತೆರಡರವರೆಗೆ ತಮ್ಮ ಒಂದು ಅಧ್ಯಕ್ಷಗಿರಿಯನ್ನು ಮಾಡಿದರು. ಅದು ಆದ ಮೇಲೆ ಅದಕ್ಕಿಂತಲೂ ಹಿಂದಿನ ಹಿನ್ನೆಲೆಯನ್ನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ತಾವು ಕೂಡ ತಮ್ಮ ಸಂತಾಪ ಸೂಚನೆಯಲ್ಲಿ ತಿಳಿಸಿದ್ದೀರಿ. ಅವರು ಮಂತ್ರಿಗಳಾಗಿ, ಮುಖ್ಯ ಮಂತ್ರಿಗಳಾಗಿ, ಕೇಂದ್ರ ಸಚಿವರಾಗಿ, ಕಾಂಗ್ರೆಸ್ ಅಧ್ಯಕ್ಷರಾಗಿ, ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಹೀಗೆ ಅನೇಕ ನಾನಾ ಹುದ್ದೆಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಅಂತಹ ಒಬ್ಬ ಮಹಾನ್ ನಾಯಕನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅದರ ಜೊತೆಯಲ್ಲಿ ಇವತ್ತು ನಮ್ಮ ಸದನದಲ್ಲಿರತಕ್ಕಂಥ ಶ್ರೀಮಾನ್ ಡಾ। ಚಿತ್ತರಂಜನ್‌ರವರು ಕೂಡ ನಮ್ಮನ್ನು ಅಗಲಿದ್ದಾರೆ, ಬಿಟ್ಟು ಹೋಗಿದ್ದಾರೆ. ಬಹುಶಃ ಈಗಾಗಲೇ ತಾವು ಹೇಳದ ಹಾಗೆ ಅವರು ಇಲ್ಲಿ ಯಾವುದೇ ಒಂದು ವಿಷಯದ ಮೇಲೆ ಮಾತನಾಡಬೇಕಾದರೆ ಬಹಳ ಅರ್ಥಪೂರ್ಣವಾಗಿ ತಿಳಿದುಕೊಂಡು, ವಿಶೇಷವಾಗಿ ಆರೋಗ್ಯದ ಇಲಾಖೆಗೆ ಸಂಬಂಧಿಸಿದಂತೆ ಬೇಡಿಕೆ ಬಂದಾಗ ಅದರ ಮೇಲೆ ಚೆನ್ನಾಗಿ ಮಾತನಾಡತಕ್ಕಂಥ ಒಂದು ಅಭ್ಯಾಸವನ್ನು ಇಟ್ಟುಕೊಂಡಿದ್ದರು. ಅಧ್ಯಕ್ಷರೆ ತಮಗೆ ಗೊತ್ತಿದೆ, ಇಲ್ಲಿ ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್ ಬಗ್ಗೆ ಚರ್ಚೆ ನಡೆದಾಗ, ಅದರ ಬಗ್ಗೆ ಅವರು ಸಾಕಷ್ಟು ಬೆಳಕನ್ನು ಚೆಲ್ಲಿದರು. ಬಹುಶಃ ನಮ್ಮ ಇಲಾಖೆಯವರು ಅಷ್ಟೊಂದು ಮಾಹಿತಿಯನ್ನು ಕೊಡಲಿಲ್ಲ. ಏಕೆಂದರೆ ಅಷ್ಟೊಂದು ಮಾಹಿತಿಯನ್ನು ಅವರು ಈ ಸದನದಲ್ಲಿ ಕೊಟ್ಟಿದ್ದರು. ಅದರ ಬಗ್ಗೆ ತಾವು ಕೂಡ ಸ್ಪಷ್ಟೀಕರಣವನ್ನು ಕೇಳಿದ್ದೀರಿ ಎನ್ನುವುದು ನನ್ನ ನೆನಪಿಗೆ ಬರುತ್ತಿದೆ. ಅಂತಹ ಒಬ್ಬ ಉತ್ತಮವಾದಂಥ ಲೆಜಿಸ್ಲೇಟರ್ ಅನ್ನು ನಾವು ಕಳೆದುಕೊಂಡಿದ್ದೇವೆ. ಜೊತೆಯಲ್ಲಿ ಅನೇಕ ಹಿರಿಯ ರಾಜಕಾರಣಿಗಳು ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ. ಶ್ರೀಮಾನ್ ವೀರಶೆಟ್ಟ ಕುಸನೂರ್‌ರವರು ನಮ್ಮ ಉತ್ತರ ಕರ್ನಾಟಕದಲ್ಲಿ ಹೆಸರುವಾಸಿಯಾದಂಥ ಸಹಕಾರಿ ಕ್ಷೇತ್ರದಲ್ಲಿ ಸೇವೆಯನ್ನು ಸಲ್ಲಿಸಿದಂತಹ ಒಬ್ಬ ವ್ಯಕ್ತಿ. ಅವರು ರಾಜ್ಯಸಭಾ ಸದಸ್ಯರಾಗಿದ್ದರು, ಬಹುಶಃ ಅದನ್ನು ಇಲ್ಲಿ ಉಲ್ಲೇಖ ಮಾಡಿಲ್ಲ. ಶಾಸಕರಾಗಿ

ರಾಜ್ಯಸಭಾ ಸದಸ್ಯರಾಗಿ, ಸಚಿವರಾಗಿ ಮತ್ತು ಈಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಎಂಟು ವರ್ಷ ಇದ್ದರು. ಬಹುಶಃ ಅವರು ಎಂಟು ವರ್ಷಗಳ ಕಾಲ ಅಧ್ಯಕ್ಷರಾಗಿದ್ದಾರೆಂದು ಆರು ವರ್ಷಕ್ಕೆ ಸೀಮಿತಗೊಳಿಸತಕ್ಕಂಥ ಒಂದು ಕಾನೂನನ್ನು ಅವರಿಗೋಸ್ಕರ ತರಬೇಕಾಯಿತು. ಇಂತಹ ಅನೇಕ ಕ್ಷೇತ್ರಗಳಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರ ರಾಷ್ಟ್ರ ಮಟ್ಟದಲ್ಲೂ ಕೂಡ ಉಪಾಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ಹೀಗೆ ಅವರು ಒಬ್ಬ ಅತ್ಯಂತ ಪ್ರಭಾವಿ ವ್ಯಕ್ತಿ ಮತ್ತು ಸರಳ ವ್ಯಕ್ತಿ, ಈ ಸಹಕಾರ ರಂಗದಲ್ಲಿ ಸಾಕಷ್ಟು ಕೆಲಸವನ್ನು ಮಾಡಿ ಅವರು ಕೂಡ ನಮ್ಮನ್ನು ಇವತ್ತು ಬಿಟ್ಟು ಹೋಗಿದ್ದಾರೆ. ಅದೇ ರೀತಿಯಾಗಿ ಶ್ರೀ ವೆಂಕಟಗಿರಿಯಪ್ಪನವರು, ಶ್ರೀ ಕೆ.ಜೆ. ರಾಮಸ್ವಾಮಿಯವರು, ಶ್ರೀ ಜಿ.ಬಸವಯ್ಯನವರು, ಶ್ರೀ ಪಿ.ಎಫ್. ರೋಡ್ರಿಗಸ್ ರವರು ಸಹ ನಮ್ಮನ್ನು ಅಗಲಿದ್ದಾರೆ. ಶ್ರೀ ಪಿ.ಎಫ್. ರೋಡ್ರಿಗಸ್ ರವರು ಕೂಡ ದಿವಂಗತ ಶ್ರೀ ದೇವರಾಜ ಅರಸ್ ರವರ ಕಾಲದಲ್ಲಿ ನನ್ನ ಜೊತೆಯಲ್ಲಿ ಮಂತ್ರಿಯಾಗಿದ್ದವರು, ಅವರೂ ಕೂಡ ಒಬ್ಬ ಸರಳ ವ್ಯಕ್ತಿ ಮತ್ತು ನೇರ ನುಡಿಗೆ ಹೆಸರಾದಂಥ ಒಬ್ಬ ವ್ಯಕ್ತಿ, ಅವರನ್ನು ಕೂಡ ನಾವು ಇವತ್ತು ಕಳೆದುಕೊಂಡಿದ್ದೇವೆ. ಹೀಗೆ ಬಹುಶಃ ಈ ತಿಂಗಳೇ ನಮಗೆ ಸರಿಯಿಲ್ಲವೆಂದು ಅನಿಸುತ್ತದೆ. ಏಕೆಂದರೆ, ಇದೇ ಬ್ಲ್ಯೂ ನೋಡಿ ನಮ್ಮ ಶ್ರೀ ಎಸ್. ಡಿ. ಗಾಂವಕರ್ ರವರು, ಅವರು ಕೂಡ ನಾನು ಮಂತ್ರಿಯಾಗಿದ್ದಾಗ ಮೇಲ್ಮನೆಯಲ್ಲಿ ಅಧ್ಯಕ್ಷರಾಗಿದ್ದರು ಮತ್ತೆ ಇಲ್ಲೂ ಕೂಡ ಸದಸ್ಯರಾಗಿದ್ದರು, ಪುನಃ ಮೊನ್ನೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಕೂಡ ಸೇವೆಯನ್ನು ಸಲ್ಲಿಸಿದರು. ಹೀಗೆ ಅನೇಕ ಗಣ್ಯ ವ್ಯಕ್ತಿಗಳನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ, ಅದಕ್ಕೆ ತಾವು ತಂದಂಥ ಪ್ರಸ್ತಾವನೆಯನ್ನು ನಾನು ಕೂಡ ಬೆಂಬಲಿಸುತ್ತಾ, ಅವರ ಕುಟುಂಬಕ್ಕೆ ಶಾಂತಿ ಸಿಗಲಿ ಹಾಗೂ ಅವರಿಗೆ ಈ ಅಗಲಿಕೆಯಿಂದಾದಂಥ ನಷ್ಟವನ್ನು ಭರಿಸತಕ್ಕಂಥ ಶಕ್ತಿ ಬರಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ **ಶ್ರೀ ಯು.ಆರ್.ಸಭಾಪತಿ (ಉಡುಪಿ):-** ಸನ್ಮಾನ್ಯ ಸಭಾಧ್ಯಕ್ಷರೆ, ಮಾಜಿ ರಾಷ್ಟ್ರಪತಿಗಳಾದ ಶ್ರೀಯುತ ನೀಲಂ ಸಂಜೀವರೆಡ್ಡಿಯವರು ಇವತ್ತು ನಮ್ಮ ಮುಂದೆ ಇಲ್ಲ. ಅತ್ಯಂತ ಸ್ವತಂತ್ರ ಘನೋಪ್ರವೃತ್ತಿಯ ಒಬ್ಬ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಒಬ್ಬ ಛಲವಾದಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀ ನೀಲಂ ಸಂಜೀವರೆಡ್ಡಿಯವರು ತಮ್ಮ ಜೀವನದಲ್ಲಿ ಮಹತ್ವಪೂರ್ಣವಾದಂಥ ಒಂದು ಸವಾಲನ್ನು ಸ್ವೀಕಾರ ಮಾಡಿ ರಾಷ್ಟ್ರಪತಿಗಳ ಚುನಾವಣೆಯ ಸಂದರ್ಭವನ್ನು ಎದುರಿಸಿದರು. ಚುನಾವಣೆಯಲ್ಲಿ ಸೋತರೂ ಕೂಡ ರಾಜಕೀಯದಲ್ಲಿ ಒಂದು ವಿಪರ್ಯಾಸ. ಆತ್ಮ ಸಾಕ್ಷಿಗೆ ಸರಿಯಾಗಿ ಶ್ರೀಮತಿ ಇಂದಿರಾಗಾಂಧಿಯವರು ಕರೆಕೊಟ್ಟರೂ ಕೂಡ ಕೊನೆಗೆ ಒಮ್ಮೆ ಇಂದಿರಾಗಾಂಧಿಯವರಿಗೆ ಪ್ರಮಾಣ ವಚನ ಕೊಡುವಂತಹ ಒಂದು ಸಂದರ್ಭ ಶ್ರೀ ನೀಲಂ ಸಂಜೀವರೆಡ್ಡಿಯವರಿಗೆ ಬಂದದ್ದು, ಇದೊಂದು ರಾಜಕೀಯದ ದೊಡ್ಡ ವಿಪರ್ಯಾಸ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಂತಹ ಶ್ರೀ ನೀಲಂ ಸಂಜೀವರೆಡ್ಡಿಯವರು ಇವತ್ತು ನಮ್ಮ ಕರ್ನಾಟಕದಲ್ಲೇ ಹಲವು ವರ್ಷದವರೆಗೆ ಉಳಿದುಕೊಂಡು ನಿಧನರಾಗಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರ ನಿಧನಕ್ಕೆ ಅತ್ಯಂತ ದುಃಖದಾಯಕವಾಗಿ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಅದರ ಜೊತೆಗೆ ನಮ್ಮ ಜೊತೆಯಲ್ಲಿ ಡಾ॥ ಚಿತ್ತರಂಜನ್ ರವರು ಇದ್ದರು. ಡಾ। ಚಿತ್ತರಂಜನ್ ರವರಿಗೂ ನನಗೂ ಸ್ವಲ್ಪ ಸಂಬಂಧವಿದೆ. ಏಕೆಂದರೆ, ಅವರು ಹುಟ್ಟಿ ಬೆಳೆದ ಊರು ನಮ್ಮ ಉಡುಪಿ. ಉಡುಪಿಯ ಸಮೀಪದ ಉಪ್ಪೂರಿನಲ್ಲಿ ಅವರು ಹುಟ್ಟಿ ಬೆಳೆದರು. ಅಲ್ಲೇ ಅವರು

ವಿದ್ಯಾಭ್ಯಾಸವನ್ನು ಮಾಡಿಕೊಂಡು ಮುಂದೆ ಹೋದರು. ಅವರ ತಂದೆ ಶ್ರೀನಿವಾಸ ಭಟ್ಟರು ಹಾಗೂ ಶ್ರೀನಿವಾಸ ಭಟ್ಟರವರ ಆರು ಜನ ಸಹೋದರ ಸಹೋದರಿಯರೆಲ್ಲಾ ಉಡುಪಿಯ ಶಾಲೆಯಲ್ಲೇ ಕಲಿತು ಮುಂದೆ ಹೋದವರು. ಕಳೆದ ಆರು ತಿಂಗಳ ಹಿಂದೆ ಅವರ ತಂದೆಯವರು ನಮ್ಮ ಮನೆಗೆ ಬಂದಾಗ ಬಹಳ ಹೆದರಿಕೆಯಾಗುತ್ತಿದೆ, ಡಾ॥ ಚಿತ್ತರಂಜನ್‌ರವರ ಬಗ್ಗೆ ನಾನು ಬಹಳ ವ್ಯಥಿತನಾಗಿದ್ದೇನೆ ಎನ್ನುವ ಮಾತನ್ನು ಕೂಡ ಅವರು ಹೇಳಿದರು. ಅಂತು ಇಲ್ಲಿ, ನಮ್ಮ ವಿಧಾನ ಸಭೆಯೊಳಗೆ ಅವರು ಮಾತು, ಅವರ ಒಂದು ಅಧ್ಯಾಯನ, ಪ್ರತಿಯೊಂದು ಸಮಸ್ಯೆಗಳ ವಿಶ್ಲೇಷಣೆ - ಇದರ ಬಗ್ಗೆ ಅವರು ಗಂಭೀರವಾಗಿ ಮಾತನಾಡುವುದು, ಅದರ ಜೊತೆಗೆ ಪಕ್ಷಭೇದವಿದ್ದರೂ ಕೂಡ ಯಾವುದೇ ಪಕ್ಷ ಭೇದವನ್ನು ಮರೆತು ನಮ್ಮ ಜೊತೆ ಬಹಳ ಸ್ನೇಹಾಚಾರದಿಂದ ಇದ್ದವರು. ಅಂತಹ ಒಬ್ಬ ವ್ಯಕ್ತಿ ಗುಂಡೇಟಿಗೆ ತುತ್ತಾಗಿ ನಿಕನವನ್ನು ಹೊಂದಿದ್ದಾರೆಂದು ಹೇಳಿದರೆ, ಇದು ಪ್ರಜಾಪ್ರಭುತ್ವದ ಒಂದು ದುರಂತವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಆದರಲ್ಲೂ ಅತೀ ಸಣ್ಣ ಪ್ರಾಯದಲ್ಲಿ, ಅವರು ಇನ್ನು ಬಹಳಷ್ಟು ಸಾಧನೆ ಮಾಡುವಂತಹ ಒಂದು ಸಂದರ್ಭದಲ್ಲಿ ಅವರ ನಿಧನವಾಗಿದೆ. ಈ ಸಂದರ್ಭದಲ್ಲಿ ನಮ್ಮ ಸಹೋದ್ಯೋಗಿಯಾಲಿ ಇಲ್ಲಿ ಇದ್ದಂತಹ ಡಾ॥ ಚಿತ್ತರಂಜನ್‌ರವರು ಹಾಗೂ ಉಳಿದ ಮಾಜಿ ಸಚಿವರಾದ ಶ್ರೀ ಪಿ.ಎಫ್.ರೋಡ್ರಿಗಸ್‌ರವರು, ನಾನು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದಾಗಲೂ ಕೂಡ ನಮಗೂ ಅವರಿಗೂ ಬಹಳ ಸ್ನೇಹವಿತ್ತು. ಅವರು ಬಹಳ ಅತ್ಯಂತ ಸರಳವಾದಿ, ಅತ್ಯಂತ ಸರಳತನದಲ್ಲಿ ಅವರು ತಮ್ಮ ಜೀವನವನ್ನು ನಡೆಸಿದರು, ಅವರೂ ಸಹ ಇವತ್ತು ನಮ್ಮ ಕಣ್ಣಮುಂದೆ ಇಲ್ಲ. ಅದೇ ರೀತಿ ಮಾಜಿ ಸದಸ್ಯರಾಗಿದ್ದಂಥ ಶ್ರೀ ಕೆ.ಜಿ. ರಾಮಸ್ವಾಮಿಯವರು, ಶ್ರೀ ಬಿ.ಬಸವಯ್ಯನವರು ಶ್ರೀ ಡಿ.ಟಿ. ಮಾಯಣ್ಣನವರು ಹಾಗೂ ಶ್ರೀ ವೆಂಕಟಗಿರಿಯಪ್ಪನವರು ಹೀಗೆ ಇನ್ನೂ ಅನೇಕ ಸದಸ್ಯರು ಇವತ್ತು ನಮ್ಮ ಮುಂದೆ ಇಲ್ಲ, ಅವರೆಲ್ಲರಿಗೂ ನಾನು ಸಂತಾಪವನ್ನು ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

★ **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-** ಮಾನ್ಯ ಅಧ್ಯಕ್ಷರೇ, ತಾವು ಸೂಚಿಸಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ಈ ಮಹನೀಯರುಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತಿದ್ದೇನೆ. ಶ್ರೀಮಾನ್ ನೀಲಂ ಸಂಜೀವರೆಡ್ಡಿಯವರು, ಮಾಜಿ ರಾಷ್ಟ್ರಪತಿಯವರು, ಕರ್ನಾಟಕದಲ್ಲೇ ನಾನು ಇರಬೇಕು ಎಂದು ಅವರ ತೀರ್ಮಾನ. ಆಂಧ್ರಕ್ಕಿಂತ ನನಗೆ ಕರ್ನಾಟಕವೇ ಬಹಳ ಸಂತೋಷ, ಇಲ್ಲಿರಬೇಕು ಎಂದು ಹೇಳಿ ಇಲ್ಲೇ ವಾಸವನ್ನು ಮಾಡಿದ್ದಂಥವರು. ಅವರ ನಿಧನದಿಂದ ಒಬ್ಬ ಯುಗಪುರುಷನೇ ಮಾಯವಾದಂಥ ರೀತಿಯಲ್ಲಿ ನಮಗೆ ಆಗಿದೆ. ಇವರೆಲ್ಲಾ ಯುಗಪುರುಷರ ಸ್ಥಾನಕ್ಕೆ ಸೇರಿದಂಥ ವ್ಯಕ್ತಿಗಳು. ಒಂದು ಕಾಲದಲ್ಲಿ ಅವರ ರಾಷ್ಟ್ರಪತಿ ಚುನಾವಣೆ, ಈ ದೇಶದ ಒಂದು ಚರಿತ್ರೆಯನ್ನು ಬದಲಾವಣೆ ಮಾಡಿತು. ಅವರ ಕಾಲ, ಅವರ ಜೊತೆಯ ಆ ಸಂದರ್ಭ, ಸಂಜೀವ ರೆಡ್ಡಿಯವರು, ಅತುಳೆ ಘೋಷ್, ಸಿ.ವಿ.ಗುಪ್ತ ಅವರೆಲ್ಲಾ ಆ ಸಂದರ್ಭದಲ್ಲಿ ಅವರ ವ್ಯಕ್ತಿತ್ವ, ಶ್ರೀಮಾನ್ ನಿಜಲಿಂಗಪ್ಪನವರು, ಅವರ ಒಂದು ಸಿಂಡಿಕೇಟ್, ಆ ವ್ಯವಸ್ಥೆ ಎಲ್ಲಾ ನೋಡಿದಾಗ ಆ ಕಾಲದಲ್ಲಿ ಎಷ್ಟು ಅದಕ್ಕೆ ಒಂದು ಎತ್ತರ, ಶಕ್ತಿ, ಮಹತ್ತರ ಇತ್ತು ಎನ್ನತಕ್ಕಂಥಾದ್ದು ನಮ್ಮೆಲ್ಲರಿಗೂ ಅರಿವಾಗಿದೆ. ಒಂದು ಸಂದರ್ಭದಲ್ಲಿ, ಅವರನ್ನು ಭೇಟಿ ಮಾಡತಕ್ಕಂಥ ಒಂದು ಸಂದರ್ಭ, ನಾನು ಶಾಸನ ಸಭಾ ಚುನಾವಣೆಗೆ ಸ್ಪರ್ಧಿಯಾಗಬಾರದು ಎಂದು ನನ್ನ ಚುನಾವಣೆಯ ಅರ್ಹತೆಯನ್ನು ರದ್ದು

ಮಾಡಿದಾಗ, ಆ ರದ್ದನ್ನು ರದ್ದುಪಡಿಸಿ ಮತ್ತೆ ಚುನಾವಣೆಗೆ ನಿಲ್ಲಬೇಕು, ಅರ್ಹತೆ ಪಡೆಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ನಾವು ಅವರನ್ನು ಭೇಟಿ ಮಾಡಿದಂಥ ಸಂದರ್ಭ. ಈಗಿನ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ಜೆ.ಹೆಚ್.ಪಟೇಲ್‌ರವರು, ಬೊಮ್ಮಾಯಿಯವರು, ಗುರುಪಾದ ಸ್ವಾಮಿಯವರು, ಇವರೆಲ್ಲರೂ ನನ್ನ ಜೊತೆಯಲ್ಲಿ ಬಂದು ನನ್ನ ಪರವಾಗಿ ಅವರ ಜೊತೆಯಲ್ಲಿ ಮಾತನಾಡಲಿಕ್ಕೆ ಬಂದರು. ರಾಷ್ಟ್ರಪತಿ ಭವನದಲ್ಲಿ ಅವರು ಎಷ್ಟು ಸರಳವಾಗಿ ಮಾತನಾಡಿದರು ಎಂದರೆ, ಚುನಾವಣೆಯಲ್ಲಿ ಹೆಚ್ಚಿನ ಹಣ ಖರ್ಚು ಮಾಡಿದರು ಎಂದು ಹೇಳಿ ಅನರ್ಹತೆ ಮಾಡತಕ್ಕಂತಥಾದ್ದು ಅರ್ಥವಿಲ್ಲದ್ದು, ಇದಕ್ಕೆ ಬೆಲೆಯಿಲ್ಲ ಎನ್ನತಂಕ್ಕಂಥ ಮಾತನ್ನು ಸ್ಪಷ್ಟವಾಗಿ ನೇರವಾಗಿ ಹೇಳಿ, ಚೆನ್ನಾರೆಡ್ಡಿಯವರನ್ನು ನೆನೆಸಿಕೊಂಡರು. ಚೆನ್ನಾರೆಡ್ಡಿಯವರ ಪರಿಸ್ಥಿತಿ ಹೇಗೆ ಆಗಿತ್ತು, ಇದೆ ಎನ್ನತಂಕ್ಕಂಥಾದ್ದನ್ನು ನೆನೆಸಿಕೊಂಡರು. ಈ ಸಂದರ್ಭವನ್ನು ನಾನು ನೆನೆಸಿಕೊಂಡಾಗ ತಕ್ಷಣದಿಂದ ನನ್ನ ಅನರ್ಹತೆಯನ್ನು ತೆಗೆಯುವುದಕ್ಕೆ ಅವರು ತೀರ್ಮಾನ ಮಾಡಿ ನನ್ನ ಅರ್ಜಿಯ ಮೇಲೆ ಶಿಫಾರಸ್ಸು ಮಾಡಿದರು. ಅದಾದ ನಂತರ ಶೇಕ್ ದಾರ್‌ರವರು ಚುನಾವಣಾ ಆಯೋಗದ ಕಾರ್ಯದರ್ಶಿಯಾದರು, ನಂತರ ತೆಗೆದರು. ಆ ಒಂದು ವ್ಯಕ್ತಿತ್ವ, ಒಂದು ದೇಶದ ದೊಡ್ಡ ಶಕ್ತಿಯನ್ನು ನಾವು ಕಳೆದುಕೊಂಡಾಗಿದೆ. ಅವರ ಆತ್ಮಕ್ಕೆ ಶಾಂತಿ ದೊರಕಬೇಕು. ಮತ್ತು ಪ್ರಾಮಾಣಿಕವಾಗಿ ನಮ್ಮ ಕರ್ನಾಟಕದಲ್ಲಿ ಅವರು ಕೊನೆಯ ಉಸಿರನ್ನು ಎಳೆದಿದ್ದಾರೆ, ಇಂಥ ಯುಗಪುರುಷರ ನೆನಪಿಗೆ ಅವರ ಒಂದು ಸ್ಮಾರಕವಾಗಿ ಕರ್ನಾಟಕ ಸರ್ಕಾರ ಒಂದು ಪ್ರಾಮಾಣಿಕ ಚಿಂತನೆಯನ್ನು ಮಾಡಬೇಕು ಅನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀಮಾನ್ ಚಿತ್ತರಂಜನ್‌ನವರು ಇಷ್ಟು ಬೇಗ ನಮ್ಮನ್ನು ಅಗಲುತ್ತಾರೆಂದು ನಾವು ಯಾರೂ ಕಂಡಿರಲಿಲ್ಲ. ಒಂದು ದಿನ ನಿರರ್ಗಳವಾಗಿ ಭಾಷಣ ಮಾಡಿದರು, ಸುಮಾರು ೪೫ ನಿಮಿಷಗಳ ಕಾಲ ಎಷ್ಟು ಚೆನ್ನಾಗಿ ಮಾತನಾಡಿದರು ಎಂದರೆ ಪ್ರಪ್ರಥಮವಾಗಿ ಶಾಸನ ಸಭೆಗೆ ಬಂದು, ಅವರ ಮಾತು ಅಷ್ಟು ಸುಂದರವಾಗಿ ಎಲ್ಲರೂ ಕೇಳತಕ್ಕಂಥ ಒಂದು ವಾದ ಆಗಿತ್ತು. ಆದರೆ ಅವರು ಸತ್ತದ್ದು ಕಾಯಿಲೆ ಬಂದು ಅಲ್ಲ, ಅವರು ಸತ್ತದ್ದು ಒಬ್ಬ ಆಗಂತುಕನ ಗುಂಡಿನೇಟಿನಿಂದ. ನನಗನ್ನಿಸುತ್ತದೆ, ಸತ್ತ ನಂತರ ಸರ್ಕಾರದಲ್ಲಿ ಒಂದು ಹೇಳಿಕೆ, ಅವರಿಗೆ ಎಲ್ಲಾ ರಕ್ಷಣೆಯನ್ನು ಕೊಟ್ಟಿದ್ದೆವು ಎಂದು. ರಕ್ಷಣೆ ಕೊಟ್ಟಮೇಲೆ ಸಾಯುವುದು ಹೇಗೆ? ನಾವು ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳತಕ್ಕಂಥಾದ್ದು ಅಲ್ಲ. ಅವರ ಸಾವಿಗೆ ಕಾರಣ ಏನು ಎನ್ನುವುದನ್ನು ಹುಡುಕತಕ್ಕಂಥಾದ್ದು ಬೇರೆ ಪ್ರಶ್ನೆ. ಆದರೆ ಇಂಥ ಸೂಕ್ಷ್ಮವಾದಂಥ ಪ್ರದೇಶದಲ್ಲಿ ಗೆದ್ದು ಬಂದಿರತಕ್ಕಂಥ ಶಾಸಕರುಗಳಿಗೆ, ಅವರ ರಕ್ಷಣೆಯ ಬಗ್ಗೆ ಸರ್ಕಾರ ತೀವ್ರವಾಗಿ ಪ್ರಾಮಾಣಿಕವಾದಂಥ ಗಮನವನ್ನು ಕೊಡಬೇಕು. ನಾನು ಎಲ್ಲರಿಗೂ ರಕ್ಷಣೆ ಕೊಡಿ, ನಮ್ಮೆಲ್ಲರಿಗೂ ಪೊಲೀಸ್ ಕೊಡಿ ಎಂದು ಕೇಳುವುದಿಲ್ಲ. ಯಾರು ಸೂಕ್ಷ್ಮವಾದ ಪ್ರದೇಶದಿಂದ ಬಂದಿರುತ್ತಾರೆ ಅಂಥವರ ಬಗ್ಗೆ, ನಿಮ್ಮ ಪೊಲೀಸ್ ಇಲಾಖೆಯಲ್ಲಿ ಯಾರ್ಯಾರ ಬಗ್ಗೆ, ಏನೇನು ಅಭಿಪ್ರಾಯ ಇದೆ ಅಂಥವರ ಬಗ್ಗೆ ಯಾವ ರೀತಿ ಸ್ಪಷ್ಟವಾಗಿ ಅವರಿಗೆ ರಕ್ಷಣೆಯನ್ನು ಕೊಡಬೇಕಉ ಎನ್ನತಕ್ಕಂಥ ಅರಿವು ಇರಲಿಲ್ಲ ಎಂದು ಹೇಳಿದರೆ ಇಂಥ ಅನಾಹುತಗಳು ಆಗತಕ್ಕಂಥಾದ್ದು ಸ್ವಾಭಾವಿಕ. ತಮಗೆ ಹೇಳುತ್ತೇನೆ, ಮಾಜಿ ಶಾಸಕರು, ನಮ್ಮ ಪ್ರೊಫೆಸರ್ ನಂಜುಂಡಸ್ವಾಮಿಯವರು. ಅವರ ಮನೆಯಲ್ಲಿದ್ದಂಥ ಅಂಗರಕ್ಷಕರನ್ನು ಹಿಂತೆಗೆದುಕೊಂಡರು. ನನಗನ್ನಿಸುತ್ತದೆ, ಇದು ನಿಜವಾಗಲೂ ನನಗೆ ಒಂದು ರೀತಿ ನಾಚಿಕೆಯಾಗುತ್ತಿದೆ. ಅವರನ್ನು ಕೇಳಿ ನೀವು

ಅಂಗರಕ್ಷಕರನ್ನು ಕೊಟ್ಟಿರಲಿಲ್ಲ. ಈ ರೀತಿ ಒಬ್ಬ ರೈತ ಮುಖಂಡ, ಚಳುವಳಿ ಮಾಡತಕ್ಕಂಥಾದ್ದು ಇಂಥವೆಲ್ಲ ಇರುತ್ತದೆ. ಇಂಥ ಮುಖಂಡರುಗಳಿಗೆ ಕೊಟ್ಟಿರತಕ್ಕಂಥಾದ್ದೇ ಯಾವುದೋ ಒಂದು ಉದ್ದೇಶದಿಂದ. ಅವರು ಯಾರೂ ಕೇಳಿ ಅಂಗರಕ್ಷಕರನ್ನು ಪಡೆದಿರುವುದಿಲ್ಲ. ಯಾವುದೋ ಒಂದು ಉದ್ದೇಶದಿಂದ ಕೊಟ್ಟಿರುತ್ತಾರೆ. ಆ ಉದ್ದೇಶವನ್ನು ಬಿಟ್ಟು ಹಿಂತೆಗೆದುಕೊಂಡರು, ಹಿಂತೆಗೆದುಕೊಂಡರು ಎಂದು ಪತ್ರಿಕೆಗಳ ಮೂರು ಮೂರು ಮುಖಪುಟದಲ್ಲಿ ಬಂತು. ಅವರು ಕೇಳಿಯೂ ಇರಲಿಲ್ಲ, ತಾವಾಗೇ ಕೊಟ್ಟಿದ್ದೀರಿ, ಅದರಲ್ಲೇನೂ ತಪ್ಪಿಲ್ಲ. ಆದರೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ತೀವ್ರವಾಗಿ ಆಲೋಚನೆ ಮಾಡಬೇಕು. ಅಂಥ ಆಲೋಚನೆ ಮಾಡದೇ, ಎಲ್ಲಾ ಆದ ಮೇಲೆ, ಗುಂಡೇಟು ಬಿದ್ದು ಸತ್ತಮೇಲೆ ಇಲ್ಲಿ ನಾವು ಸಂತಾಪ ಸೂಚಕ ಸಭೆ ಮಾಡತಕ್ಕಂಥ ವ್ಯವಸ್ಥೆ ಇದು ಇದ್ದದ್ದೇ. ಅದಕ್ಕಿಂತ ಇದು ಆಗದೇ ಇರತಕ್ಕಂಥ, ಆದಷ್ಟು ತಡೆಯತಕ್ಕಂಥ ವ್ಯವಸ್ಥೆಯನ್ನು ಮಾಡತಕ್ಕಂಥಾದ್ದು ಒಂದು. ಎರಡನೇ ವಿಚಾರದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಅದೇನೆಂದರೆ 'ಪರಿಹಾರ'. ಸತ್ತ ಒಬ್ಬ ಮಾಜೀ ಶಾಸಕರು, ಅವರು ಯಾರೇ ಇರಲಿ, ಅವರ ಬಗ್ಗೆ ಇದನ್ನು ನಾವು ಚಿಂತನೆ ಮಾಡಬೇಕು, ಯಾರು ಏನೇ ಹೇಳಲಿ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ದಕ್ಷಿಣ ಭಾರತದ ಶಾಸಕರುಗಳ ದಿನಾಚರಣೆ ಮಾಡಿದಿರಿ, ಶಾಸಕರುಗಳನ್ನು ತಾವು ನೋಡಿದ್ದೀರಿ, ಮಾಜಿ ಶಾಸಕರುಗಳು, ಅವರ ಜೀವನ ಪರಿಸ್ಥಿತಿ ಇವೆಲ್ಲವನ್ನೂ ತಾವು ನೋಡಿದ್ದೀರಿ. ಯಾರಾದರೂ ಸತ್ತರೆ, ಅವರ ಮನೆಯಲ್ಲಿ ಇವತ್ತಿನ ದಿವಸ ಮಲಗುವುದಕ್ಕೆ ಒಂದು ಹಾಸಿಗೆ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಇರತಕ್ಕಂಥ ಮಾಜಿ ಶಾಸಕರುಗಳು ಇದ್ದಾರೆ. ಅದನ್ನು ನಾನು ಅಲ್ಲಗಳೆಯತಕ್ಕಂಥಾದ್ದು ಅಲ್ಲ. ಈ ಬಗ್ಗೆ ಒಂದು ಪರಿಣಾಮಕಾರಿಯಾಗಿ ಎಲ್ಲರೂ ಕುಳಿತು, ಒಂದು ಚರ್ಚೆ ಮಾಡಿ ಸತ್ತ ಮಾಜೀ ಶಾಸಕರುಗಳ ಕುಟುಂಬಕ್ಕೆ ಏನು ಮಾಡಬೇಕು ಅನ್ನತಕ್ಕಂಥ ಒಂದು ತೀರ್ಮಾನವನ್ನು ನಾವು ಮಾಡಲಿಲ್ಲ ಎಂದರೆ ಅದು ಒಳ್ಳೆಯ ಸಂಪ್ರದಾಯವಾಗಲಾರದು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ನಾನು ಹೇಳುತ್ತಿದ್ದೇನೆ.

ಸ್ವಾಮಿ, ರೋಡ್ರಿಗ್ಸ್‌ರವರು, ಮುನಿಯಪ್ಪನವರು, ಕೆ.ಜಿ.ರಾಮಸ್ವಾಮಿಯವರು, ಬಸವಯ್ಯನವರು, ಮಾಯಣ್ಣನವರು ಇವರೆಲ್ಲರೂ ಒಳ್ಳೆಯ ಜೀವನವನ್ನು ನಡೆಸಿ ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ಸೇವೆ ಮಾಡಿದಂಥ ಬಹಳ ಉನ್ನತವಾದಂಥ ವ್ಯಕ್ತಿತ್ವವುಳ್ಳಂಥವರು. ವೆಂಕಟಗಿರಿಯಪ್ಪನವರು ಮೊದಲಿನಿಂದಲೂ ಬಹಳ ಹೋರಾಟಗಾರರು. ಕೊನೇ ಘಳಿಗೆಯಲ್ಲಿ ಅವರು ಕಾಂಗ್ರೆಸ್ ಸೇರಿದರು. ಮೊದಲಿನಿಂದಲೂ ಅವರು ಹೋರಾಟ, ಜೈಲು ಈ ಇತಿಹಾಸದಲ್ಲೇ ಬಂದಂಥವರು. ನಾವು ಅವರ ಜೊತೆಯಲ್ಲಿ ಅನೇಕ ಸಾರಿ ಹೋರಾಟ ಮಾಡಿದ್ದೇವೆ, ಬೈರೇಗೌಡರು ಹೋರಾಟ ಮಾಡಿದ್ದಾರೆ. ಬಂಗಾರಪೇಟೆ ರೈಲ್ವೆ ಚಳುವಳಿಯಲ್ಲಿ ನಾವೆಲ್ಲಾ ಒಟ್ಟೊಟ್ಟಿಗೇ ದಸ್ತಗಿರಿಯಾಗಿರತಕ್ಕಂಥಾದ್ದು ಇದೆ. ಕೊನೆಕೊನೆಗೆ ವಿಧಾನ ಪರಿಷತ್ತಿಗೆ ಬಂದರು, ಅವರದು ಹಾಸ್ಯ ಸ್ವಭಾವ, ಗೋಪಾಲಗೌಡರ ಕಾಲದಿಂದ ಜೊತೆಯಲ್ಲಿ ಇದ್ದಂಥ ಒಬ್ಬ ಧೀಮಂತ ಶಕ್ತಿ. ಇವತ್ತು ನಿಜವಾಗಲೂ ನನಗೆ ಅವರ ಬಗ್ಗೆ ಅಪಾರವಾದ ಗೌರವವಿದೆ. ಅವರನ್ನು ನಾವು ಕಳೆದುಕೊಂಡಿದ್ದೇವೆ. ಎ.ಎಂ. ಬಸವೇಗೌಡರು ಅಜಾತಶತ್ರು. ಎ.ಎಂ. ಬಸವೇಗೌಡರು ಬಹಳ, ಅತ್ಯಂತ ಹೆಚ್ಚಿನ ರೀತಿಯಲ್ಲಿ ದಾನ ಮಾಡುವುದೇ ಅವರ ಮೊದಲನೇ ಕೈ. ಅವರು ಶಾಸಕರಾಗಿರಲಿ, ಏನೇ ಇರಲಿ, ಯಾರೇ ಬರಲಿ, ಅಂಥ ತೂಕದ ವ್ಯಕ್ತಿತ್ವ ಇದ್ದಂಥ ಒಬ್ಬ

ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀಮಾನ್ ಮಲ್ಲಿಕಾರ್ಜುನಪ್ಪನವರು ಬಹಳ ವ್ಯಕ್ತಿತ್ವ ಇರತಕ್ಕಂಥ ದೊಡ್ಡ ಶಕ್ತಿ. ವೀರಶೆಟ್ಟಿ ಕಾಸನೂರ್‌ರವರು ಇಷ್ಟು ಬೇಗ ನಮ್ಮನ್ನು ಅಗಲುತ್ತಾರೆಂದುಕೊಂಡಿರಲಿಲ್ಲ. ಆವತ್ತು ನನಗಂತೂ ಬಹಳ ನೋವಾಯಿತು. ಅವರು ನಮ್ಮ ಶ್ರೀಮಾನ್ ಧರ್ಮಸಿಂಗ್ ಅವರ ಮನೆಗೆ ಯಾವಾಗಲೂ ಬರುತ್ತಿದ್ದರು. ಅವರಿಗೂ ಇವರಿಗೂ ಬಹಳ ಸ್ನೇಹ. ಉರ್ದುವಿನಲ್ಲಿ ಇಬ್ಬರೂ ಬಹಳ ಮಾತನಾಡುವುದು. ಈ ಇಬ್ಬರು ಮಾತನಾಡುವುದು ನಮಗೆ ಅರ್ಥವಾಗುತ್ತಿರಲಿಲ್ಲ. ಅವರು ಅನೇಕ ಸಾರಿ ಮಾತನಾಡಿದ್ದರು. ಎಷ್ಟು ಸೌಮ್ಯ ಸ್ವಭಾವ, ಒಳ್ಳೆಯ ವ್ಯಕ್ತಿ, ಇವರನ್ನು ನಾವು ಕಳೆದುಕೊಂಡಿರತಕ್ಕಂಥಾದ್ದು ನಮಗೆ ನಿಜವಾಗಿ ಅತ್ಯಂತ ನೋವಾಗಿದೆ. ಎಸ್. ಡಿ. ಗಾವಂಕರ್‌ರವರು ವಿಧಾನ ಪರಿಷತ್ತಿನ ಸಭಾಪತಿಯಾಗಿ ಬಹಳ ಒಳ್ಳೆಯ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದಂಥ ವ್ಯಕ್ತಿ. ಇವರೆಲ್ಲರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎನ್ನುವ ಮಾತನ್ನು ಹೇಳುತ್ತೇನೆ. ಈ ಕೆಲವು ಮಾತುಗಳನ್ನು ಆಡತಕ್ಕಂಥ ಅವಕಾಶ ಕಲ್ಪಿಸಿದ್ದಕ್ಕೋಸ್ಕರವಾಗಿ ತಮಗೆ ವಂದನೆ ಸಲ್ಲಿಸಿ ನಿಮ್ಮ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಅನುಮೋದನೆ ಸೂಚಿಸುತ್ತೇನೆ.

★ **ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ):-** ಸನ್ಮಾನ್ಯ ಸಭಾಧ್ಯಕ್ಷರೇ, ತಾವು ಸದನದ ಮುಂದೆ ಮಂಡಿಸಿರತಕ್ಕಂಥ ಈ ಸಂತಾಪ ಸೂಚನೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ, ಮೊಟ್ಟಮೊದಲನೆಯದಾಗಿ ನೀಲಂ ಸಂಜೀವರೆಡ್ಡಿಯವರ ನಿಧನದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ನಾನು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ನೀಲಂ ಸಂಜೀವರೆಡ್ಡಿಯವರ ರಾಜಕೀಯ ಜೀವನದ ಬಗ್ಗೆ ಮಾತನಾಡುವಾಗ ಭಾರತದ ರಾಜಕಾರಣದಲ್ಲಿ ಅದಂಥ ಬಹಳ ಪ್ರಮುಖ ಬದಲಾವಣೆಯ ರೂವಾರಿ ಅವರಾಗಿದ್ದರು ಎನ್ನತಕ್ಕಂಥಾದ್ದು ಬಹಳ ಪ್ರಾಮುಖ್ಯವಾದಂಥ ವಿಷಯ. ಅದರ ಜೊತೆಯಲ್ಲಿ ಅವರು ತಾವು ನಂಬಿದ್ದಂಥ ತತ್ವ, ಆ ತತ್ವಕ್ಕೆ ಎಷ್ಟು ನಿಷ್ಠರಾಗಿದ್ದರು ಎಂದು ಹೇಳುವುದಕ್ಕೆ ನನಗೆ ಗೊತ್ತಿರತಕ್ಕಂಥ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಅವರು ಆಂಧ್ರದ ಮುಖ್ಯ ಮಂತ್ರಿಯಾಗಿ ಚುನಾವಣೆಯಲ್ಲಿ ಸ್ಪರ್ಧೆ ಮಾಡತಕ್ಕಂಥ ಸಂದರ್ಭ ಬಂದಾಗ ಅವರ ಸಹೋದರಿಯ ಗಂಡನ ವಿರುದ್ಧವೇ ಚುನಾವಣಾ ಕಣದಲ್ಲಿ ಹೋರಾಟ ಮಾಡತಕ್ಕಂಥ ಪರಿಸ್ಥಿತಿ ಬಂದಿತ್ತು. ಅಂದರೆ ಆವತ್ತಿನ ಪರಿಸ್ಥಿತಿಯಲ್ಲಿ ಇಡೀ ಆಂಧ್ರದಲ್ಲಿ ಪ್ರಮುಖ ರಾಜಕೀಯ ಸೆಣಸಾಡಬೇಕಾದಂಥ ಪರಿಸ್ಥಿತಿ ಬಂದಾಗ ಇಡೀ ನೀಲಂ ಸಂಜೀವ ರೆಡ್ಡಿಯವರ ಕುಟುಂಬ ಅವರ ವಿರುದ್ಧವಾಗಿತ್ತು. ನಾಗರೆಡ್ಡಿಯವರ ವಿರುದ್ಧ ನೀವು ಸ್ಪರ್ಧೆ ಮಾಡಬಾರದು, ಬೇರೆ ಯಾವುದಾದರೂ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿ ಎಂದು ಇಡೀ ಕುಟುಂಬ ಅವರ ಮೇಲೆ ಎಷ್ಟೇ ಒತ್ತಾಯ ಹಾಕಿದರೂ ಕೂಡ ಅವರು ಒಪ್ಪಲಿಲ್ಲ. ನಾನು ಯಾವ ಕ್ಷೇತ್ರದಿಂದ ಸ್ಪರ್ಧೆ ಮಾಡಬೇಕು ಎಂದು ನನ್ನ ಪಕ್ಷ ತೀರ್ಮಾನ ಮಾಡಿದೆಯೋ, ಅದೇ ಕ್ಷೇತ್ರದಿಂದ ನಾನು ಸ್ಪರ್ಧೆ ಮಾಡುತ್ತೇನೆ ಎಂದು ಹೇಳಿದಾಗ, ಅವರ ಇಡೀ ಕುಟುಂಬ ಅವರ ವಿರುದ್ಧವಾಗಿ ಆ ಕ್ಷೇತ್ರದಲ್ಲಿ ಕೆಲಸ ಮಾಡಿತು. ಅದರೂ ಕೂಡ ಅವರು ತಾವು ನಂಬಿದ್ದಂಥ ತತ್ವ, ತಾನಿದ್ದಂಥ ಪಕ್ಷದ ನಿಷ್ಠೆಗೆ ಅಷ್ಟು ಹೆಸರುವಾಸಿಯಾಗಿದ್ದಂಥವರು. ಅದನ್ನೇ ಅವರು ಇಡೀ ಜೀವನದಲಿ ಪ್ರದರ್ಶನ ಮಾಡುತ್ತಾ ಬಂದಿದ್ದಾರೆ, ತೋರಿಸಿದ್ದಾರೆ, ಮತ್ತು ರಾಷ್ಟ್ರದ ರಾಜಕಾರಣಕ್ಕೆ ತಮ್ಮದೇ ಆದಂಥ ನಿಷ್ಪಾವಂತ ಮೌಲ್ಯಗಳನ್ನು ಬಿಟ್ಟು ಹೋಗಿದ್ದಾರೆ. ಇದೊಂದು ಪ್ರಮುಖವಾದಂಥ ಐತಿಹಾಸಿಕ ಘಟನೆ. ೮೫ ವರ್ಷಗಳ ಐತಿಹಾಸಿಕ ಕಾಂಗ್ರೆಸ್ ವಿಭಜನೆಯಾಯಿತು. ೧೯೬೯ನೇ ಇಸವಿಯಲ್ಲಿ ವಿಭಾಗವಾಗುತ್ತದೆ.

ಕಾಂಗ್ರೆಸ್ಸಿಗೆ ೮೫ ವರ್ಷ ವಯಸ್ಸು ಆಗಿತ್ತು. ಕಾಂಗ್ರೆಸ್ ಚಳುವಳಿ ಎಂದು ಹೇಳಿದರೆ, ಇಡೀ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯ ನಾಯಕತ್ವವನ್ನು ವಹಿಸಿದಂಥ ಕಾಂಗ್ರೆಸ್ ಪಕ್ಷ ವಿಭಾಗವಾಗತಕ್ಕಂಥ ಸಂದರ್ಭದಲ್ಲಿ ಅದರ ರೂವಾರಿ ಕೂಡ ನೀಲಂ ರೆಡ್ಡಿಯವರಾಗಿದ್ದರು ಎನ್ನತಕ್ಕಂಥಾದ್ದು ಬಹಳ ಮುಖ್ಯವಾದಂಥ ರಾಜಕೀಯ ಬೆಳವಣಿಗೆ.

ಇಡೀ ಕಾಂಗ್ರೆಸ್ಸೇ ಆ ಅಂಶದ ಬಗ್ಗೆ ವಿಭಜನೆ ಆಗತಕ್ಕಂಥ ಸಂದರ್ಭದಲ್ಲಿಯೂ ಕೂಡ ತಾನು ನಂಬಿದಂಥ ತತ್ವಕ್ಕೆ ಅವರು ನಿಷ್ಠರಾಗಿದ್ದದ್ದು, ಇಡೀ ದೇಶದ ರಾಜಕಾರಣದಲ್ಲಿ ಒಂದು ಪ್ರಮುಖವಾದಂಥ ಬದಲಾವಣೆಗೆ ಎಡೆಮಾಡತಕ್ಕಂಥದ್ದು ಮತ್ತು ಆ ರಾಜಕಾರಣದಲ್ಲಿ ಇಡೀ ದೇಶದ ರಾಜಕೀಯ ಪರಿಸ್ಥಿತಿ ಕೂಡ ತೀವ್ರಗತಿಯಲ್ಲಿ ಬದಲಾವಣೆ ಆಗಿದ್ದು ಕೂಡ ನಾವೆಲ್ಲರೂ ಗಮನಿಸಿದ್ದೇವೆ. ಅವರು ಈ ದೇಶದ ರಾಜಕೀಯ ಜೀವನದಲ್ಲಿ ಮತ್ತು ರಾಜಕೀಯ ರಂಗದಲ್ಲಿ ಅದಂಥ ಹೆಚ್ಚಿನ ಅಧಃಪತನದ ಮೌಲ್ಯಗಳನ್ನು ಸಹಿಸಲಿಕ್ಕೆ ಸಾಧ್ಯವಿಲ್ಲದೆ ರಾಜಕೀಯ ರಂಗ ಅಧಃಪತನ ಹೊಂದುತ್ತಿರತಕ್ಕಂಥದನ್ನು ನೋಡಿ ಬಹಳ ನೊಂದು ರಾಜಕೀಯ ಜೀವನದಿಂದ ನಿವೃತ್ತಿಯಾದಂಥ ಸಂದರ್ಭದಲ್ಲಿ ಅವರು ಪುನಃ ಸಕ್ರಿಯ ರಾಜಕಾರಣಕ್ಕೆ ಬಹುಶಃ ಬರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ೧೯೭೭ರ ಚುನಾವಣೆಯಲ್ಲಿ ಗೆದ್ದ ನಂತರ ಅವರು ಲೋಕಸಭೆಯ ಸ್ಪೀಕರ್ ಆದರು. ನಂತರ ರಾಷ್ಟ್ರಪತಿಗಳಾದರು. ಅವರು ರಾಷ್ಟ್ರಪತಿಗಳಾಗಿದ್ದಂಥ ಸಂದರ್ಭದಲ್ಲಿಯೂ ಕೂಡ ರಾಜಕೀಯವಾಗಿ ಬಹಳ ಪ್ರಮುಖವಾದಂಥ ಭಾರತ ದೇಶದಲ್ಲಿ ಇತ್ತು. ೧೯೭೯ನೇ ಇಸವಿಯಲ್ಲಿ ಅಂದಿನ ಜನತಾ ಸರ್ಕಾರ ಪತನಗೊಂಡಿತ್ತು. ೨ನೇ ಬಾರಿಗೆ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬಂದಂಥ ಸಂದರ್ಭ ಇಡೀ ಭಾರತದ ರಾಜಕೀಯ ಇತಿಹಾಸದಲ್ಲಿ ಬಹಳ ಪ್ರಮುಖವಾಗಿ ಘಟನೆಯಾದಂಥ ಸಂದರ್ಭದಲ್ಲಿ ನೀಲಂ ಸಂಜೀವರೆಡ್ಡಿಯವರು ನಿರ್ವಹಿಸಿದಂಥ ಪಾತ್ರವನ್ನು ಎಲ್ಲರೂ ಕೂಡ ಆಶ್ಚರ್ಯದಿಂದ ಮತ್ತು ಮೆಚ್ಚುಗೆಯಿಂದ ನೋಡತಕ್ಕಂಥ ಒಂದು ವಿಷಯವಾಗಿದೆ. ಆ ದೃಷ್ಟಿಯಲ್ಲಿ ಅವರು ಇಡೀ ಭಾರತದ ರಾಜಕಾರಣದಲ್ಲಿ ತಮ್ಮದೇ ಆದಂಥ ಒಂದು ಪ್ರತ್ಯೇಕವಾದ ಸ್ಥಾನವನ್ನು ಸಂಪಾದಿಸಿ ಭಾರತದ ರಾಜಕೀಯ ಮೌಲ್ಯಗಳಿಗೆ ಅವರು ಸಾಕಷ್ಟು ಬೆಲೆಯನ್ನು ನೀಡಿದ್ದಾರೆ. ಈ ಸಂತಾಪ ಸೂಚನೆಯಲ್ಲಿ ಸೂಚಿಸಿರತಕ್ಕಂಥ ಎಲ್ಲಾ ಮಾಜಿ ಮತ್ತು ಹಾಲಿ ಸದಸ್ಯರಾಗಿ ನಿಧನ ಹೊಂದಿರತಕ್ಕಂಥ ಎಲ್ಲಾ ಪ್ರಮುಖ ಮುಖಂಡರಿಗೆ ಸಂತಾಪವನ್ನು ಸೂಚಿಸುತ್ತಾ ಡಾ: ಚಿತ್ತರಂಜನ್‌ರವರ ಕೊಲೆಯ ಬಗ್ಗೆ ಹೇಳುವುದಾದರೆ, ಇದು ನಿಜವಾಗಿಯೂ ಕೂಡ ರಾಜ್ಯದಲ್ಲಿರತಕ್ಕಂಥ ಕೋಮು ಶಕ್ತಿಗಳ, ಕೋಮುವಾದಿಗಳ ಅಟ್ಟಹಾಸಕ್ಕೆ ಬಲಿಯಾಗಿರತಕ್ಕಂಥದ್ದು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಬಹುಶಃ ಮುನ್ನೆಚ್ಚರಿಕೆಯಿಂದ ಇದ್ದಿದ್ದರೆ ಒಬ್ಬ ಪ್ರತಿಭಾವಂತ ಶಾಸಕನನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಾ ಇತ್ತು. ಮತ್ತು ಕೋಮು ಶಕ್ತಿಗಳ ಆಟವನ್ನು ತಡೆಯಲಿಕ್ಕೆ ಸಾಧ್ಯವಾಗುತ್ತಾ ಇತ್ತು. ಆದರಲ್ಲಿ ಎಲ್ಲೋ ಒಂದು ಕಡೆ ಎಚ್ಚರ ತಪ್ಪಿದೆ ಎನ್ನತಕ್ಕಂಥದನ್ನು ನಾವು ಗಮನಿಸಬೇಕಾಗುತ್ತದೆ. ಈ ಎಲ್ಲಾ ಅಗಲಿದ ಮಹನೀಯರಿಗೆ ಸಂತಾಪವನ್ನು ಸೂಚಿಸಲಿಕ್ಕೆ ಅವಕಾಶ ಕೊಟ್ಟಂಥ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

★ **ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):-** ಮಾನ್ಯ ಅಧ್ಯಕ್ಷರೆ, ಈ ಸಭೆಯ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸುತ್ತಾ ಈಗ ನಾವು ೧೨ ಜನ ಮಹನೀಯರನ್ನು ಕಳೆದುಕೊಂಡಿದ್ದೇವೆ. ಅದರಲ್ಲೂ ನೀಲಂ ಸಂಜೀವ ರೆಡ್ಡಿಯವರು ಅಪಾ ಅನುಭವವುಳ್ಳ ವ್ಯಕ್ತಿಯಾಗಿದ್ದರು. ಅವರ

ಒಡನಾಡಿಯಾಗಿ ಇದ್ದವರು ರಾಜಕಾರಣದ ಅವರ ಹೋರಾಟ ಬಗ್ಗೆ ಮಾತನಾಡುತ್ತಿದ್ದರು. ಅದರಲ್ಲೂ ನಾವು ನೀವು ಎಲ್ಲಾ ಅವರ ಬಗ್ಗೆ ಮಾತನಾಡಿಕೊಳ್ಳುತ್ತೇವೆ. ಸುಮಾರು ೧೫ ವರ್ಷಗಳ ಹಿಂದೆ ಇದ್ದಂಥ ರಾಜಕೀಯ, ರಾಜಕಾರಣದಲ್ಲಿ ಇದ್ದಂಥ ಕಾಳಜಿ, ಪ್ರಾಮಾಣಿಕತೆ ಒಳ್ಳೆಯ ನುಡಿಗಳು ಇವತ್ತು ನಾಶವಾಗುತ್ತಾ ಇದೆ. ರಾಜಕಾರಣ ಸಮಾಜದ ಪರವಾಗಿಲ್ಲದೆ ಬಹಳ ಕೆಳಮಟ್ಟಕ್ಕೆ ಹೋಗುತ್ತಾ ಇದೆ. ಹಿಂದೆ ಇದ್ದಂಥ ಭದ್ರತೆ ಬಗ್ಗೆ ನಾವು ಎಲ್ಲಾ ಪಕ್ಷದ ಸದಸ್ಯರು ಮಾತನಾಡಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಅವರ ಸಾವಿನಿಂದ ಅವರ ಅನುಭವವನ್ನು ಸಹ ಕಳೆದುಕೊಂಡಿದ್ದೇವೆ. ಆದರೆ ಅವರ ಅನುಭವದ ನೆನಪನ್ನು ನಾವೆಲ್ಲ ಕಳೆದುಕೊಳ್ಳದೆ ಅದನ್ನು ಉಳಿಸಿಕೊಂಡು ನಾವು ಉಪಯೋಗಿಸಿಕೊಳ್ಳಬೇಕು. ಅದರಲ್ಲೂ ಈ ೧೨ ಜನ ಮಹನೀಯರಲ್ಲಿ ಡಾ: ಚಿತ್ತರಂಜನ್ ವರನ್ನು ಬಹಳ ಹತ್ತಿರದಿಂದ ನೋಡಿದ್ದೇವೆ. ಅವರು ೨ ವಿಚಾರಗಳಲ್ಲಿ ಬಹಳ ಚೆನ್ನಾಗಿ ಮಾತನಾಡಿದರು. ಒಂದು ಆರೋಗ್ಯ ಇನ್ನೊಂದು ಶಿಕ್ಷಣ. ನಮ್ಮ ಜಿಲ್ಲೆಯ ರೈತ ಸಂಘದ ಅಧ್ಯಕ್ಷರು ಗ್ಯಾಲರಿಯಲ್ಲಿ ಇದ್ದಾಗ ಅವರ ಮಾತನ್ನು ಕೇಳಿ, ಅವರು ಬಹಳ ಸುಂದರವಾಗಿ ಮಾತನಾಡಿದರಲ್ಲ ಅವರು ಯಾರು ಎಂದು ನನ್ನ ಜೊತೆಯಲ್ಲಿ ಕೇಳಿದರು. ಅದಕ್ಕೆ ನಾನು ಡಾ: ಚಿತ್ತರಂಜನ್ ಎಂದು ಹೇಳಿದೆ. ನಿಜವಾಗಿಯೂ ಅವರನ್ನು ಕೊಲೆ ಮಾಡಿದ್ದಾರೆಂದರೆ ನನಗಂತೂ ೨ ದಿವಸ ಆಶ್ಚರ್ಯವೇ ಆಯಿತು. ಅವರ ಮುಖ ನೋಡಿದರೆ ಕೊಲೆ ಮಾಡುವುದಕ್ಕೆ ಏಕೆ ಮನಸ್ಸು ಬಂತೋ ತಿಳಿಯುತ್ತಿಲ್ಲ. ನಮ್ಮ ಸಮಾಜದಲ್ಲಿ ಯಾವ ರೀತಿ ಕ್ರೂರತನದಿಂದ ನಡೆದುಕೊಳ್ಳುತ್ತಾರೆ ಎನ್ನುವುದಕ್ಕೆ ಉದಾಹರಣೆ ಕೊಡುವುದಾದರೆ ನನ್ನ ಕ್ಷೇತ್ರದಲ್ಲಿ ೫-೬ ದಿವಸಗಳ ಹಿಂದೆ ಇಬ್ಬರು ಕೊಲೆಯಾಗಿದ್ದರು. ಈ ಕೊಲೆಯಾದ ಮನೆಯಲ್ಲಿ ೩ ಜನ ಮಕ್ಕಳು ಇದ್ದರು. ಅವರಲ್ಲಿ ಒಬ್ಬ ಮಗ ಅವನ ಜೊತೆಯಲ್ಲಿ ೪ ಜನ ಹಂತಕರನ್ನು ಕರೆದುಕೊಂಡು ಬಂದು ಬಾಗಿಲು ತಟ್ಟಿದಾಗ ತಾಯಿ ಬಾಗಿಲು ತೆಗೆದಿದ್ದಳು. ಈ ಮಕ್ಕಳಲ್ಲಿ ಕೇವಲ ೪ ಗುಂಟೆ ಜಮೀನು ವ್ಯವಹಾರ ಇತ್ತು. ಆತನು ತನ್ನ ತಂದೆ ಮತ್ತು ಅಣ್ಣನನ್ನು ಛಿದ್ರ ಛಿದ್ರವಾಗಿ ಹೊಡೆದಿದ್ದಾನೆ. ಅದನ್ನು ನೋಡುವುದಕ್ಕಾಗುವುದಿಲ್ಲ. ಇದರಿಂದ ಮನುಷ್ಯ ಇಂತಹ ಕ್ರೂರತನಕ್ಕೆ ಬಲಿಯಾಗುತ್ತಾನೆ ಎನ್ನುವುದನ್ನು ನೋಡಬಹುದು. ಆ ಊರನ್ನು ಕಟ್ಟುವುದಕ್ಕೆ ಅವರೇ ಕಾರಣರಾಗಿದ್ದರು. ಇದರಿಂದ ಯಾವಾಗಲೂ ಇಂತಹ ಸಮಾಜದಲ್ಲಿ ಕ್ರೂರತೆ ಬೆಳೆಯದೆ ಇರತಕ್ಕಂಥ ರಾಜಕಾರಣವನ್ನು ಮಾಡಬಹುದಾದಂಥ ಪರಿಸ್ಥಿತಿಯನ್ನು ನಾವು ಯೋಜನೆ ಮಾಡಿದರೆ, ಕೋಮು ಗಲಭೆಗಳು ಆಗಬಹುದು, ವೈಷಮ್ಯ ಆಗಬಹುದು, ಈ ವಿಚಾರದಲ್ಲಿ ನಮ್ಮಲ್ಲಿ ಘರ್ಷಣೆ ಬೆಳೆಯಬಹುದು, ಆದರೆ ಈ ತರಹದ ಗಲಭೆಗಳಿಂದ ಈ ತರಹದ ಕ್ರೂರತೆಯಿಂದ ವ್ಯಕ್ತಿಗಳ ಸಾವು ಆಗಬಾರದು. ಆದ್ದರಿಂದ ಈ ೧೨ ಜನ ಕುಟುಂಬದವರೆಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳುತ್ತಾ ವಂದಾನ ನಿರ್ಣಯಕ್ಕೆ ಗೌರವ ಸಲ್ಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

SRI B.I.PATIL: Hon'ble Speaker Sir, since the last Session, we have lost several important personalities. Notable among them are Dr.Neelam Sanjiva Reddy, Dr.U.Chittaranjan, and Sri S.D.GaonKar, a sitting member of the Upper House.

Dr. Neelam sanjiva Reddy had served in the highet office of

our country as the president of India` He fought relentlessly for the freedom of our country and was jailed several times. He fought for the cause of rural masses and downtrodden. His death has created a vaccum.

Dr. U.Chittaranjan who was sitting Member of this House fell vicitim to an assasin at the young age. He had the capacity to serve thestate aby his own contribution. I condemn the cowardly act of the assasin with all force at my command.

We lost another notable member Sri S.D.Gaonkar who represented the Upper House. He was illustrious parliamentarian. He had served as the Chairman of the Upper House. He had contributed much for the upliftment of border area people, especially Belgaum.

Besides the above leaders, we have also lost some of the important personalities as mentioned by you.

On behalf of the M.E.S., I condole thedeath of all these personalities and pray God to give strength to the family members of the bereaved and also pray for eternal peace for the departed souls.

SRI C.RAJENDRAN (K.G.F.):- I am thankful to you Sir for giving me an opportunity to pay homage to the departed leaders. Dr.Neelam Sanjiva Reddy was a great and towering personality in the political and social field of our conutry. His contribution in the Indian Political and Social field, both, during pre-independence and post-independent era will be remembered by all of us forever. We have lost such a great man. wherever he was, he was held in high esteem and was respected by one and all.

Mr. Speaker Sir, we have lost our great friend and colleague Dr. Chittaranjan very recently. His loss is a loss to the valued politics, and indeed it is a great loss to the B.J.P. and we missued such a good friend. I can say he is a dynamic personality, used to fight against injust and unlawful matters wherever he was. He was such a great man and we lost him through some anti-social elements. Today while preying for his soul to rest in peace, we have to console his

family members. What happened to him today may affect the entire members of this House. Such incidents should not happen in future. In the memory of that great man, I suggest to install a memorable Pillar in his Bhatkal constituency. This incident should be a lesson to other members and also the officers and bureaucrats as to what is the fate of the members in this society. I am thankful to the Hon'ble speaker for giving me this opportunity and I pray that his soul rest in peace.

★ **ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):-** ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂತಹ ಸಂತಾಪ ಸೂಚನೆಯನ್ನು ಸಮರ್ಥನೆ ಮಾಡುತ್ತಾ, ಭಾರತದ ಮಾಜಿ ರಾಷ್ಟ್ರಪತಿಯಾಗಿದ್ದಂತಹ ದಿವಂಗತ ನೀಲಂ ಸಂಜೀವರೆಡ್ಡಿಯವರು, ಶ್ರೀ ಮಹಾತ್ಮ ಗಾಂಧೀಜಿಯವರ ಅನುಯಾಯಿಯಾಗಿದ್ದಂತಹ ಆ ಪೀಳಿಗೆಯ ಒಬ್ಬರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಬಹುಶ: ಅವರ ಬದುಕಿನ ಉದ್ದಕ್ಕೂ ಕೆಲವು ಮೌಲ್ಯಗಳಿಗಾಗಿ ಹೋರಾಟ ಮಾಡುತ್ತಾ, ಈ ದೇಶದಲ್ಲಿ ಅನೇಕ ರಾಜಕೀಯ ಅಧಿಕಾರಿಗಳ ಅಧಿಕಾರಗಳನ್ನು ಅನುಭವಿಸಿ ಬಹಳಷ್ಟು ಸೇವೆಯನ್ನು ಶ್ರೀ ನೀಲಂ ಸಂಜೀವರೆಡ್ಡಿಯವರು ಮಾಡಿದ್ದಾರೆ. ಅವರ ಬದುಕು ಇವತ್ತಿನ ಯುವ ಪೀಳಿಗೆಗೆ ಸ್ಫೂರ್ತಿ ಮತ್ತು ಚೇತನ ಆಗುತ್ತದೆ ಎನ್ನತಕ್ಕಂಥದ್ದನ್ನು ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ. ಒಬ್ಬ ರೈತನ ಮನೆತನದಿಂದ ಬಂದಂತಹ ಶ್ರೀ ನೀಲಂ ಸಂಜೀವರೆಡ್ಡಿಯವರು ಅತ್ಯಂತ ಉನ್ನತ ಸ್ಥಾನವಾದ ರಾಷ್ಟ್ರಪತಿಯವರ ಸ್ಥಾನಕ್ಕೆ ಹೋಗಿದ್ದಂತಹವರು. "from peasaent to President". ಭಾರತದ ರಾಷ್ಟ್ರಪತಿಗಳಲ್ಲಿ ಆಂಧ್ರಪ್ರದೇಶದ ಭಾಗದಿಂದಲೇ ಬಹಳಷ್ಟು ಜನ ರಾಷ್ಟ್ರಪತಿಗಳಾಗಿದ್ದರು. ಆಂಧ್ರಪ್ರದೇಶದಿಂದ ೩-೪ ಜನ ರಾಷ್ಟ್ರಪತಿಗಳಾಗಿದ್ದವರಲ್ಲಿ ಇವರು ಸಹ ಒಬ್ಬರಾಗಿದ್ದರು. ಡಾ: ರಾಧಾಕೃಷ್ಣರವರು, ವಿ.ವಿ. ಗಿರಿಯವರು, ನೀಲಂ ಸಂಜೀವರೆಡ್ಡಿಯವರು, ಡಾ: ಹುಸೇನ್‌ರವರು ಕೂಡ ಆಂಧ್ರಪ್ರದೇಶದ ಹೈದ್ರಾಬಾದ್‌ನಲ್ಲಿಯೇ ಹುಟ್ಟಿದ್ದಂತವರು. ಆಂಧ್ರಪ್ರದೇಶವು ಹೆಚ್ಚು ರಾಷ್ಟ್ರಪತಿಗಳನ್ನು ಕೊಟ್ಟಿದ್ದಂತಹ ರಾಜ್ಯ. ಶ್ರೀ ನೀಲಂ ಸಂಜೀವರೆಡ್ಡಿಯವರು ಆಂಧ್ರಪ್ರದೇಶದ ಮುಖ್ಯಮಂತ್ರಿಯವರಾಗಿ, ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಬಹಳ ಹಂತಗಳಲ್ಲಿ ಕೆಲಸಗಳನ್ನು ಮಾಡಿದ್ದಾರೆ. ಶ್ರೀ ನೀಲಂ ಸಂಜೀವರೆಡ್ಡಿಯವರಿಗೆ ಕೊನೆಯದಾಗಿ ಕನ್ನಡ ನಾಡಿನಲ್ಲಿ ಜೀವಿಸಿ ತನ್ನ ಕೊನೆಯ ಜೀವನವನ್ನು ಕಳೆದು ಕರ್ನಾಟಕದಲ್ಲಿಯೇ ಮಣ್ಣಾಗಬೇಕೆಂದು ಆಸೆ ಇತ್ತು. ಹಾಗಾಗಿ ಅವರು ಇವತ್ತಿನ ದಿವಸ ಕನ್ನಡ ನಾಡಿನಲ್ಲಿಯೇ ಮಣ್ಣಾಗಿ ಹೋಗಿದ್ದಾರೆ. ಇವರ ಆತ್ಮಕ್ಕೆ ಶಾಂತಿ ದೊರಕಲಿ ಮತ್ತು ಇವರ ಕುಟುಂಬದವರಿಗೆ ಇವರ ಸಾವಿನ ದು:ಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತನು ಕೊಡಲಿ ಎಂದು ನಾನು ಆಶಯವನ್ನು ವ್ಯಕ್ತಪಡಿಸುತ್ತೇನೆ. ಮತ್ತು ನಮ್ಮೆಲ್ಲರಿಗೂ ಕೂಡ ಅವರ ಬದುಕು ಮಾರ್ಗದರ್ಶನವಾಗಲಿ ಎನ್ನುವ ಮಾತನ್ನು ಕೂಡ ಹೇಳಲಿಕ್ಕೆ ಬಯಸುತ್ತಿದ್ದೇನೆ. ಇದರ ಜೊತೆಗೆ ನನ್ನ ಜೊತೆಯಲ್ಲಿ ಕೆಲಸವನ್ನು ಮಾಡುತ್ತಿದ್ದಂತಹ ಡಾ: ಚಿತ್ತರಂಜನ್ ಕೂಡ ಹಂತಕರ ಗುಂಡಿಗೆ ಬಲಿಯಾಗಿದ್ದಾರೆ. ಇದೊಂದು ಖಂಡನೀಯವಾದ ಹೇಯ ಕೃತ್ಯ. ಡಾ: ಚಿತ್ತರಂಜನ್‌ರವರು ಇನ್ನು

ಬಹಳಷ್ಟು ದಿವಸಗಳ ಕಾಲ ಈ ಸದನದಲ್ಲಿ ಕೆಲಸವನ್ನು ಮಾಡಬೇಕಾಗಿತ್ತು. ಮತ್ತು ವೈದ್ಯಕೀಯ ವೃತ್ತಿಯಲ್ಲಿ ಸಾಕಷ್ಟು ಜ್ಞಾನವನ್ನು ಪಡೆದುಕೊಂಡಿದ್ದರು ಎಂಬುದು ಅವರ ಮಾತಿನ ಮೂಲಕವೇ ಗೊತ್ತಾಗುತ್ತಿತ್ತು. ಅವರಿಗೆ ವೈದ್ಯಕೀಯ ವಿಭಾಗದಲ್ಲಿ ಬಹಳಷ್ಟು ಜ್ಞಾನ ಇತ್ತು. ಇವರಲ್ಲದೇ ಇನ್ನು ಬಹಳಷ್ಟು ಮಾಜಿ ಮಂತ್ರಿಗಳು, ಮಾಜಿ ಶಾಸಕರುಗಳು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರುಗಳಲ್ಲಿ ಶ್ರೀ ಪಿ.ಎಫ್.ರೊಡ್ರಿಗನ್, ಕೆ.ಜೆ.ರಾಮಸ್ವಾಮಿಯವರು ನಮ್ಮ ಜಿಲ್ಲೆಯ ಬನ್ನೂರಿನವರು, ಇವರು ೧೯೮೫ರಲ್ಲಿ ಶಾಸಕರಾಗಿದ್ದರು. ಶ್ರೀ ಕೆ.ಜೆ.ರಾಮಸ್ವಾಮಿಯವರು ಸಾಮಾನ್ಯ ರೈತ ಕುಟುಂಬದಿಂದ ಬಂದಂತವರು ಮತ್ತು ಇವರು ಬಹಳ ಸರಳ ಜೀವಿಯಾಗಿದ್ದರು. ಅವರು ಕೂಡ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಶ್ರೀ ಬಿ.ಬಸವಯ್ಯನವರು ಕೂಡ ನಮ್ಮ ಜಿಲ್ಲೆಯವರು. ಶ್ರೀ ಬಿ.ಬಸವಯ್ಯನವರು 4 ಬಾರಿ ಈ ಸದನದ ಸದಸ್ಯರಾಗಿದ್ದರು. ಮತ್ತು ದಲಿತರ ಬಗ್ಗೆ ಮತ್ತು ತುಳಿತಕ್ಕೆ ಒಳಗಾದವರ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡಿದ್ದಂತಹ ವ್ಯಕ್ತಿಯಾಗಿದ್ದರು. ಈ ಇಬ್ಬರು ಕೂಡ ನಮ್ಮ ಪಕ್ಷದವರೇ ಆಗಿದ್ದರು. ಇವರುಗಳ ಜೊತೆಗೆ ಡಿ.ಟಿ.ಮಾಯಣ್ಣ ಕೂಡ ನಮ್ಮ ಪಕ್ಷದವರೇ ಆಗಿದ್ದು ಶಾಸಕರು ಸಹ ಆಗಿದ್ದರು. ಇವರೂ ಕೂಡ ಕೆಳ ಹಂತದಿಂದ ರಾಜಕೀಯಕ್ಕೆ ಬಂದಿದ್ದವರು. ಅತ್ಯಂತ ಸರಳ ವ್ಯಕ್ತಿಗಳು ಸಹ ಆಗಿದ್ದರು. ಎಲ್ಲಾ ಮಾಜಿ ಶಾಸಕರು, ಮಾಜಿ ಸಚಿವರು ನಮ್ಮನ್ನು ಅಗಲಿ ಹೋಗಿದ್ದಾರೆ. ಇವರೆಲ್ಲರ ಆತ್ಮಕ್ಕೆ ಶಾಂತಿ ದೊರಕಲಿ ಇವರ ಎಲ್ಲಾ ಕುಟುಂಬ ವರ್ಗದವರಿಗೆ ಇವರ ಸಾವಿನ ದು:ಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತನು ನೀಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ **ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ):-** ಸನ್ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಶ್ರೀ ಡಿ.ವಿ.ಜಿ.ಯವರ ಒಂದು ಮಾತು ನೆನಪಿಗೆ ಬರುತ್ತದೆ. ಅದು ಏನೆಂದರೆ, ತೊಟ್ಟಿಲುಗಳೆಷ್ಟೋ ಮಸಣಗಳೆಷ್ಟೋ ಧರೆಯೊಳಗೆ, ತೊಟ್ಟಿಲಿಗೆ ಹಬ್ಬ, ಮಸಣವು ತಿಂದು ತೇಗುತ್ತಿರಲು, ಹುಟ್ಟುವವರೆಲ್ಲರೂ ಸಾಯದೇ ಹೋದರೆ, ಹೊಸದಾಗಿ ಹುಟ್ಟುವವರಿಗೆ ಎಡೆಯಲ್ಲೋ ಮಂಕು ತಿಮ್ಮ. ಹುಟ್ಟು ಆಕಸ್ಮಿಕ, ಸಾವು ಸ್ವಾಭಾವಿಕ. ಅದನ್ನು ನಾವು ಪ್ರತಿನಿತ್ಯ ನೋಡುತ್ತಾ ಇರತಕ್ಕಂಥಾದ್ದು. ಇವತ್ತು ತಾವು ತಂದಿರತಕ್ಕಂತಹ ನಿರ್ಣಯದಲ್ಲಿ ಡಾ: ಚಿತ್ತರಂಜನ್‌ರವರ ಸಾವು ಕೂಡ ಸೇರಿದೆ. ಅದು ಸ್ವಾಭಾವಿಕ ಸಾವು ಅಲ್ಲ. ಅಸ್ವಾಭಾವಿಕ ಸಾವು. ಸಾವು ಸ್ವಾಭಾವಿಕವಾದರೆ ಯಾರಿಗೂ ನೋವಾಗುವುದಿಲ್ಲ. ಅಸ್ವಾಭಾವಿಕವಾದಾಗ ಮನಸ್ಸಿಗೆ ನೋವಾಗುತ್ತದೆ. ಡಾ: ಚಿತ್ತರಂಜನ್‌ರವರ ಸಾವನ್ನು ತಪ್ಪಿಸಬಹುದಿತ್ತೋ ಏನೋ ಎಂಬುದು ನಮ್ಮ ಅನ್ನಿಸಿಕೆ. ಇಂಥದ್ದು ಮತ್ತೆ ಆಗಬಾರದೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಮತ್ತು ಶ್ರೀ ನೀಲಂ ಸಂಜೀವರೆಡ್ಡಿಯಂತಹವರ ಜೀವನ ನಮಗೆ ದಾರಿ ದೀಪವಾಗಬೇಕು, ಅವರ ನೆನಪು ವಿಭೂತಿಯ ಪೂಜೆಯು ನಮ್ಮಂತಹವರಿಗೆ ಆಗಬೇಕು. ಇಷ್ಟು ಹೇಳಿ ತಾವು ಏನು ನಿರ್ಣಯವನ್ನು ತಂದಿದ್ದೀರೋ ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ತಾವು ಈ ದಿವಸ ಸಂತಾಪ ಸೂಚಕ ನಿರ್ಣಯವನ್ನು ಈ ಸದನದ ಮುಂದೆ ಮಂಡಿಸಿದ್ದೀರಿ. ಇದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಈ ಸಂದರ್ಭದಲ್ಲಿ ನಿಧನವಾಗಿರತಕ್ಕಂಥ ಇಬ್ಬರ ವಿಚಾರದಲ್ಲಿ ನಾನು ಮಾತನಾಡಲೇಬೇಕಾಗಿದೆ. ಒಬ್ಬರು ಶ್ರೀ ನೀಲಂ ಸಂಜೀವರೆಡ್ಡಿಯವರು ಈ ದೇಶದ ಅತ್ಯುನ್ನತವಾದಂತಹ ಸ್ಥಾನವನ್ನು ಅಲಂಕರಿಸಿದವರು.

ಬಹಳಷ್ಟು ಜನ ರಾಷ್ಟ್ರಪತಿಯ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ ಒಬ್ಬ ರೈತನಾಗಿ, ಹಳ್ಳಿಯಲ್ಲಿ ಹುಟ್ಟಿ ಬೆಳೆದವನಾಗಿ ರಾಷ್ಟ್ರಪತಿಯ ಸ್ಥಾನವನ್ನು ಅಲಂಕರಿಸಿರತಕ್ಕಂಥವರಲ್ಲಿ ಶ್ರೀ ನೀಲಂ ಸಂಜೀವರೆಡ್ಡಿಯವರು ಮೊದಲನೆಯವರಾಗಿದ್ದಾರೆ. ಈ ಮಾತು ಅವರ ಬಾಯಿಯಿಂದಲೇ ಬಂದಿದೆ. ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡತಕ್ಕಂತಹ ಮೊದಲನೆಯ ಸಂದರ್ಭದಲ್ಲಿ ಅವರೇ ಉಲ್ಲೇಖಿಸಿದ್ದಾರೆ. ನಮ್ಮ ಸಮಾಜದಲ್ಲಿ, ನಮ್ಮ ದೇಶದಲ್ಲಿ ಶೇ. 70ರಷ್ಟು ಜನರು ಹಳ್ಳಿಯಲ್ಲಿ ಹುಟ್ಟಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ ಬೆಳೆದಿರತಕ್ಕಂಥವರಿಗೆ ನ್ಯಾಯಯುತವಾಗಿ ಇಂತಹ ಸ್ಥಾನಗಳು ಸಿಗಬೇಕು. ಆದರೆ ಅದು ಸಿಗುವುದಿಲ್ಲ. ಆ ರೀತಿಯಾಗಿ ಸಿಗದೇ ಇರುವುದು ಪರಿಸ್ಥಿತಿಯ ಒತ್ತಡದಿಂದ, ಪರಿಸ್ಥಿತಿಯ ಚಿತಾವಣೆಯಿಂದ ಅದು ಸಿಗುತ್ತಿದೆ. ಅಪರೂಪವಾಗಿ ಇಲ್ಲೊಬ್ಬರಿಗೆ ಅಲ್ಲೊಬ್ಬರಿಗೆ ಅದು ಸಿಕ್ಕಿದರೆ ಆಗ ಈ ಸಮಾಜ ದೃಷ್ಟ ರೀತಿಯಲ್ಲಿ, ಕ್ರೂರ ರೀತಿಯಲ್ಲಿ ಕಾಣತಕ್ಕಂಥದ್ದನ್ನು ನಾವು ಸಮಾಜದಲ್ಲಿ ಕಾಣುತ್ತಿದ್ದೇವೆ. ಮಾನ್ಯ ಸಂಜೀವ ರೆಡ್ಡಿಯವರ ಜೀವನದಲ್ಲೂ ಅದನ್ನು ಅನುಭವಿಸಿದ್ದಾರೆ. ಶ್ರೀ ಸಂಜೀವರೆಡ್ಡಿಯವರು ರಾಜಕೀಯವಾಗಿ ಎಷ್ಟು ಹೋರಾಟವನ್ನು ನಡೆಸಿ ಅತಿ ಉನ್ನತ ಸ್ಥಾನಕ್ಕೆ ಬಂದರೋ ಅದೇರೀತಿ ಅವರ ಆರೋಗ್ಯದ ವಿಚಾರವನ್ನು ತೆಗೆದುಕೊಂಡಾಗಲೂ ಅವರದ್ದು ಏಕೈಕ ಉದಾಹರಣೆ ಎಂದೆನಿಸುತ್ತದೆ. ಸಾಮಾನ್ಯವಾಗಿ ಕ್ಯಾನ್ಸರ್ ರೋಗ ಯಾರಿಗಾದರೂ ತಗುಲಿದರೆ ಅತಿ ಹೆಚ್ಚು ಎಂದರೆ 6 ತಿಂಗಳು ಅಥವಾ 1 ವರ್ಷ ಅವರ ಆಯಸ್ಸಿನ ಅವಧಿ. ಅಂಥಾದ್ದರಲ್ಲಿ ಅವರು ಸುಮಾರು 15 ವರ್ಷ ಕಾಲ ಬದುಕಿದ್ದಾರೆ. ರಾಜಕೀಯವಾಗಿ ಅವರು ಯಾವ ರೀತಿ ಹೋರಾಟ ಮಾಡಿ ತುತ್ತ ತುದಿಯನ್ನು ಮುಟ್ಟಿದರೋ ಅದೇ ರೀತಿ ಅವರ ಆರೋಗ್ಯದ ವಿಚಾರದಲ್ಲೂ ಅದೇ ರೀತಿಯ ಹೋರಾಟವನ್ನು ನಡೆಸಿದ್ದಾರೆ. ಇಂಥ ಕ್ಯಾನ್ಸರ್ ರೋಗ ತಗುಲಿದ ಮೇಲೂ ಇಷ್ಟೊಂದು ಆಯಸ್ಸನ್ನು ಪಡೆದುಕೊಂಡಿರುವಂಥವರ ಉದಾಹರಣೆ ಬಹುಶಃ ನನಗೆ ಬೇರೆ ಎಲ್ಲೂ ಸಿಕ್ಕುವುದಿಲ್ಲ. ಅವರ ಹೋರಾಟದ ಮುಂದೆ ಯಮನೂ ಕೂಡ ಸ್ವಲ್ಪ ಸಮಯದವರೆಗೆ ಹಿಂದೆ ಸರಿದಿದ್ದ ಎಂದು ನಾವು ಭಾವಿಸಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರಿಗೂ ಒಂದು ವಿಚಾರ ಗೊತ್ತಿರಬಹುದು. ನಾನೂ ಮತ್ತು ತಾವೂ ಅವರನ್ನು ಅನಂತಪುರದಲ್ಲಿ ಭೇಟಿ ಮಾಡುವಂಥ ಸನ್ನಿವೇಶ ಒದಗಿಬಂದಿತ್ತು. ನಾವು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ರೈತರು ಎಂಬ ಅಂಶವನ್ನು ಅವರು ಗಮನದಲ್ಲಿ ಇಟ್ಟುಕೊಂಡು ಬಹಳ ಸಹೃದಯತೆಯಿಂದ, ಬಹಳ ಅಭಿಮಾನದಿಂದ ನಮ್ಮ ಜೊತೆ ಮಾತನಾಡಿದರು ಎಂಬುದು ಗೊತ್ತಿರಬಹುದು. ಇದಕ್ಕೆ ತಾವೇ ಪ್ರತ್ಯೇಕ್ಷ ದರ್ಶಿ. ಅವರು ನಡೆದುಕೊಂಡು ಬಂದಿದ್ದ ದಾರಿ, ಅವರು ಬಿಟ್ಟು ಹೋಗಿರುವಂಥ ಆದರ್ಶವನ್ನು ನಾವು ಪಾಲನೆ ಮಾಡಿದರೆ ಅದೇ ಅವರಿಗೆ ನಾವು ಸಲ್ಲಿಸುವಂಥ ನಿಜವಾದ ಶ್ರದ್ಧಾಂಜಲಿ ಎಂದು ಹೇಳಬಯಸುತ್ತೇನೆ.

ಇನ್ನೊಬ್ಬರು ಎಂದರೆ ಮಾನ್ಯ ವೆಂಕಟಗಿರಿಯಪ್ಪನವರು. ಇವತ್ತು ಈ ಸ್ಥಾನದಲ್ಲಿ ನಾನು ನಿಂತಿರುವುದಕ್ಕೆ ಬಹುಮಟ್ಟಿಗೆ ಅವರೇ ಕಾರಣ. ನಾನು ಯಾವ ರೀತಿ ಕಾರಣನೋ ಅದೇ ರೀತಿ ಈ ರಾಜ್ಯದ ರೈತವರ್ಗ ಕೂಡ. ಪಶ್ಚಿಮದ ಕಡೆ ಮಾನ್ಯ ಗೋಪಾಲ ಗೌಡರಾದರೆ, ಪೂರ್ವದ ಕಡೆ ಮಾನ್ಯ ವೆಂಕಟಗಿರಿಯಪ್ಪನವರು. ನಮ್ಮ ರಾಜ್ಯದಲ್ಲಿ ಭೂಮಿಯ ಬಗ್ಗೆ ಹಣಗಾರಿಕೆ ಯಾವರೀತಿ ನಡೆದು ಬಂದಿದೆ ಎಂಬುದು ತಮಗೆ ಗೊತ್ತಿದೆ. ಭೂಮಿಯ ಬಗ್ಗೆ ಹೋರಾಟವನ್ನು ಪಶ್ಚಿಮದ ಕಡೆ ಮಾನ್ಯ ಗೋಪಾಲಗೌಡರು ಗೇಣಿದಾರರ ಸಮಸ್ಯೆಯನ್ನು ಎತ್ತಿ ಅವರಿಗೆ ಮುಕ್ತಿಯನ್ನು ದೊರಕಿಸುವ ಕೆಲಸವನ್ನು

ಮಾಡಿದರೆ, ಪೂರ್ವದ ಕಡೆ ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಆದಾರವಾಗಿಟ್ಟುಕೊಂಡು, ಲಕ್ಷಾಂತರ ಜನ ಜೋಡಿ ಮತ್ತು ಇನಾಂ ಗ್ರಾಮಗಳೆಂಬ ಒಂದು ಕೆಟ್ಟ ಪದ್ಧತಿ ನಮ್ಮ ರಾಜ್ಯದಲ್ಲಿತ್ತು, ಅದರ ವಿರುದ್ಧ ತೀವ್ರವಾದ ಹೋರಾಟವನ್ನು ಮಾಡಿದರು. ಆ ಹೋರಾಟದ ಪ್ರತಿಫಲವಾಗಿ ಗೇಣಿದಾರರೂ ಬಿಡುಗಡೆ ಆದರು, ಜೋಡಿ ಮತ್ತು ಇನಾಂ ಪದ್ಧತಿ ನಮ್ಮ ರಾಜ್ಯದಲಿ ನಿರ್ನಾಮವಾಗಿ ರೈತರು ನೆಮ್ಮದಿಯ ಜೀವನ ನಡೆಸಲು ಕಾರಣಕರ್ತರಾಗಿದ್ದಾರೆ. ಅವರು ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯದಲ್ಲೂ ಕೂಡ ನನ್ನಂಥ ಅನೇಕ ಯುವಕರನ್ನು, ಪೀಳಿಗೆಯನ್ನು ತಯಾರು ಮಾಡಿ ಬಿಟ್ಟು ಹೋಗಿದ್ದಾರೆ. ಅನೇಕ ಸಂದರ್ಭಗ ಅವರು ನನ್ನನ್ನು ತಿದ್ದುವಂಥ, ನನ್ನನ್ನು ಇಷ್ಟು ಎತ್ತರಕ್ಕೆ ಬೆಳೆಸುವಂಥ ಕೆಲಸವನ್ನು ಮಾಡಿದ್ದಾರೆ. ಅವರ ನಿಧನ ನನಗೆ ನಿಜವಾಗಿ ವ್ಯಥೆಯನ್ನು ತಂದಿದೆ; ಬಹಳ ನೋವು ಆಗಿದೆ. ತಮಗೆ ಆಗಿರುವ ನೋವನ್ನು ನಾನೂ ಕೂಡ ಹಂಚಿಕೊಳ್ಳುತ್ತೇನೆ.

ಇನ್ನು ಮುಖ್ಯವಾಗಿ ಡಾ। ಚಿತ್ತರಂಜನ್‌ರವರ ಬಗ್ಗೆ ನಾವೆಲ್ಲರೂ ಮಾತನಾಡಿದ್ದೇವೆ. ಇಷ್ಟು ಕ್ರೂರ ಕೊಲೆಗಳು ನಮ್ಮಲ್ಲಿ ನಡೆಯುತ್ತವೆಂಬುದಕ್ಕೆ ಇದೊಂದೇ ಉದಾಹರಣೆ ಸಾಕು. ಇಂಥ ಕ್ರೂರತೆಯನ್ನು ದೂರ ಮಾಡಲು ನಾವೆಲ್ಲರೂ ಶ್ರಮವಹಿಸಬೇಕು. ಅದಕ್ಕೆ ಪ್ರಯತ್ನಪಡಬೇಕು ಎನ್ನತಕ್ಕ ಮಾತನ್ನು ಹೇಳಿ ತಾವು ತಂದಿರತಕ್ಕ ನಿರ್ಣಯಕ್ಕೆ ನನ್ನ ಸಂಪೂರ್ಣ ಸಹಮತವನ್ನು ಸೂಚಿಸಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

★ **ಶ್ರೀ ಟಿ.ಬಿ.ಜಯಚಂದ್ರ(ಕಳ್ಳಂಬೆಳ್ಳ):-** ಮಾನ್ಯ ಸಭ್ಯಾಕ್ಷರೆ, ಇವತ್ತು ತಾವು ಸಭೆಯ ಮುಂದೆ ತಂದಿರತಕ್ಕ ಈ ಸಂತಾಪ ಸೂಚನೆಗೆ ನನ್ನ ಧ್ವನಿಯನ್ನೂ ಕೂಡಿಸಲು ಇಚ್ಛೆಪಡುತ್ತೇನೆ. ಕಳೆದ ವಿಧಾನ ಸಭೆಗೂ ಇವಿತ್ತಿಗೂ ಮಧ್ಯದ ಅವಧಿಯಾದ 3 ತಿಂಗಳಲ್ಲಿ ದುರ್ದೈವದಿಂದ ಈ ಸಮಾಜದಲಿ ಮತ್ತು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಿದಂಥ ವ್ಯಕ್ತಿಗಳನ್ನು ಕಳೆದುಕೊಂಡು ಇವತ್ತು ಸಂತಾಪವನ್ನು ಸೂಚಿಸುತ್ತಿದ್ದೇವೆ. ಇದರಲ್ಲಿ ಬಹಳ ಮುಖ್ಯವಾದವರು ಎಂದರೆ ಮಾನ್ಯ ಸಂಜೀವರೆಡ್ಡಿಯವರು. ಅವರು ರಾಷ್ಟ್ರಪತಿಗಳಾದಾಗ ಅವರ ಬಗ್ಗೆ ನಾನು ವಿಶೇಷವಾದ ಮೆಚ್ಚುಗೆಯನ್ನು ಇಟ್ಟುಕೊಂಡಿದ್ದವನು. ಅವರ ಜೊತೆ ಅನೇಕ ಸಾರಿ ನಾನು ಚರ್ಚಿಸಿರತಕ್ಕದ್ದು ಇದೆ. ಅವರು ರಾಷ್ಟ್ರಪತಿಯ ಪದವಿಯನ್ನು ಬಿಟ್ಟು ಬೆಂಗಳೂರಿಗೆ ಬಂದು ನೆಲಸಿದಮೇಲೂ ಕೂಡ ಅನೇಕ ಸಾರಿ ಅವರನ್ನು ಭೇಟಿ ಮಾಡಿದ್ದೆ. ಅವರು ನಮ್ಮ ಕರ್ನಾಟಕದ ಜನತೆಗೆ ಎಷ್ಟು ಹತ್ತಿರವಾಗಿದ್ದರು ಎಂಬುದಕ್ಕೆ ಒಂದು ನಿದರ್ಶನ ಎಂದರೆ, ನಮ್ಮ ಜಿಲ್ಲೆಗೆ ಹೊಂದಿಕೊಂಡಂತಿರುವ ಆಂಧ್ರದ ಒಂದು ಭಾಗದಿಂದ ಬಂದಿದ್ದವರಾಗಿದ್ದರೂ ನಮ್ಮ ಜಿಲ್ಲೆಯ ಪ್ರತಿಯೊಂದು ಭಾಗವೂ ಅವರಿಗೆ ಗೊತ್ತಿತ್ತು. ಅವರು ಮಾತನಾಡುತ್ತಿದ್ದ ಶೈಲಿಯನ್ನು ನಾನು ನೋಡಿದಾಗ ಅವರು ನಮ್ಮ ಕರ್ನಾಟಕದಲ್ಲೇ ಹುಟ್ಟಿದ್ದಾರೇನೋ; ಏಕೆಂದರೆ ನಮ್ಮ ಕರ್ನಾಟಕದ ಬಗ್ಗೆ ಇಷ್ಟೊಂದು ವಿಚಾರಗಳನ್ನು ತಿಳಿದುಕೊಂಡಿದ್ದಾರಲ್ಲಾ ಎಂದು ಅನಿಸುತ್ತಿತ್ತು. ರೈತ ಕುಟುಂಬದಲ್ಲಿ ಹುಟ್ಟಿದಂಥ ಒಬ್ಬ ವ್ಯಕ್ತಿ ರಾಷ್ಟ್ರದ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ್ದರು; ಆದರೂ ವಿಶೇಷವಾಗಿ ನಮ್ಮ ಕರ್ನಾಟಕದ ಜನತೆಯ ಬಗ್ಗೆ, ಇಲ್ಲಿಯ ವಾತಾವರಣದ ಬಗ್ಗೆ ಅತ್ಯಂತ ಕಳಕಳಿಯನ್ನು ಇಟ್ಟುಕೊಂಡಿದ್ದ ಅವರ ನೆನಪು ನಮಗೆ ಯಾವಾಗಲೂ ಸ್ಫೂರ್ತಿದಾಯಕವಾಗಿರಬೇಕಾದರೆ ಅವರ ಒಂದು ಸ್ಮಾರಕವನ್ನು ಮಾಡತಕ್ಕ ಬಗ್ಗೆ ಒಂದು ಚಿಂತನೆಯನ್ನು ನಮ್ಮ ಸರ್ಕಾರ ಚಿಂತಿಸುವುದು ಒಳ್ಳೆಯದೆಂಬ ಒಂದು ಸಲಹೆಯನ್ನು ಕೊಡಬಯಸುತ್ತೇನೆ.

ಮತ್ತೊಬ್ಬ ಗೆಳೆಯ ಎಂದರೆ ಡಾ॥ ಯು. ಚಿತ್ತರಂಜನ್ ರವರು. ಅವರು ನನ್ನ ಸೀಟಿನ ಹಿಂಭಾಗದಲ್ಲಿ ಕೂರುತ್ತಿದ್ದರು. ಈ ಸದನದಲ್ಲಿ ಯಾವುದೇ ವಿಚಾರ ಪ್ರಸ್ತಾಪವಾಗುವ ಸಂದರ್ಭದಲ್ಲೂ ನಾನು ಅವರ ಹತ್ತಿರವಾಗಿದ್ದುದರಿಂದ ಅನೇಕ ಸಂದರ್ಭಗಳಲ್ಲಿ ಅವರ ಚಿಂತನೆಯನ್ನು ನಾನೂ ಹಂಚಿಕೊಳ್ಳುವಂಥ ಪ್ರಸಂಗ ಬಂದಿದ್ದವು. ವಿಧಾನ ಸಭೆಯಲ್ಲಿ ನಡೆಯತಕ್ಕ ಕೆಲವು ಘಟನೆಗಳ ಬಗ್ಗೆ ಅವರು ಎಂಥ ಭಾವನೆ ಇಟ್ಟುಕೊಂಡಿದ್ದರೆಂದರೆ, ನೀವು ಅನೇಕ ಸಾರಿ ಈ ವಿಧಾನ ಸಭೆಗೆ ಸದಸ್ಯರಾಗಿ ಬಂದಿದ್ದೀರಿ, ನಾವು ಯಾವ ರೀತಿ ಯಲ್ಲಿ ಜನತೆಯ ರುಣವನ್ನು ತೀರಿಸುವುದಕ್ಕೆ ಸಾಧ್ಯ? ಎನ್ನತ್ಕಿ ಕಳಕಳಿಯನ್ನು ಅವರು ಇಟ್ಟುಕೊಂಡಿದ್ದುದು ಇವತ್ತೂ ನನ್ನ ನೆನಪಿನಲ್ಲಿದೆ. ಅವರು ಈ ಒಂದು ದುರ್ಮರಣಕ್ಕೆ ಈಡಾದರು ಎಂದರೆ ನನಗನ್ನಿಸುತ್ತದೆ, ಅವರ ಚಿಂತನೆಗೆ ಇದು ಒಂದು ದೊಡ್ಡ ಪೆಟ್ಟಾಗಿದೆ. ಬಹುಶಃ ಇಂಥ ಚಿಂತನೆಗಳನ್ನು ಇಟ್ಟುಕೊಂಡಿರುವಂಥ ಅನೇಕ ಜನ ಇಲ್ಲಿರಬಹುದು. ಅವರ ಬಗ್ಗೆ ಕೂಡ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇದೇ ರೀತಿ ಇನ್ನೊಬ್ಬರು ಎಂದರೆ ನನ್ನ ಜಿಲ್ಲೆಯಿಂದ ಬಂದಿದ್ದವರು, ನನ್ನ ಜೊತೆಯಲ್ಲಿ ಇದ್ದವರು ಎಂದರೆ ಡಿ. ಟಿ. ಮಾಯಣ್ಣನವರು. ಮಾನ್ಯ ಅಧ್ಯಕ್ಷರು ವಿಧಾನ ಸಭೆಯನ್ನು ಪ್ರಥಮವಾಗಿ ಪ್ರವೇಶ ಮಾಡಿದ ಸಂದರ್ಭದಲ್ಲೇ ಅವರೂ ಪ್ರವೇಶ ಮಾಡಿದವರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ಹುಟ್ಟು ಹೋರಾಟಗಾರರು. ತಾಳೇ ಕೆರೆಯ ಸುಬ್ರಮಣ್ಯಂರವರ ನೂರನೇ ಹುಟ್ಟು ಹಬ್ಬದ ಆಚರಣೆ ತುರುವೇಕೆರೆಯಲ್ಲಿ ನಡೆದಾಗ ತಾವೂ ಕೂಡ ಭಾಗವಹಿಸಿದ್ದಿರಿ. ಆ ಸಂದರ್ಭದಲ್ಲಿ ನಾನೂ ಕೂಡ ಮಾನ್ಯ ಮಾಯಣ್ಣನವರನ್ನು ನೆನಪು ಮಾಡಿಕೊಂಡೆ. ತಾಳೇಕೆರೆ ಸುಬ್ರಮಣ್ಯಂರವರ ಜೊತೆಯಲ್ಲೇ ಇದ್ದುಕೊಂಡು ಹೋರಾಟ ಮಾಡಿದವರು ಈ ಮಾಯಣ್ಣನವರು. ಅವರು ರಾಜಕೀಯವನ್ನು ತ್ಯಾಗ ಮಾಡಿದಾಗಲೂ ಕೂಡ ಆ ಭಾಗದ ಜನರು ಅವರಿಗೆ ಒಂದು ವಿಶೇಷವಾದ ಸ್ಥಾನವನ್ನು ಕೊಟ್ಟು ಗೌರವಿಸುತ್ತಿದ್ದರು. ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಅವರ ಆರ್ಥಿಕ ಪರಿಸ್ಥಿತಿಯನ್ನು ತಿಳಿಸಿದ್ದಾರೆ. ಇವರು ಆರ್ಥಿಕವಾಗಿ ಹಿಂದುಳಿದ ಸಮಾಜದಿಂದ ಮತ್ತು ಭಾಗದಿಂದ ಬಂದಿದ್ದವರು. ಬಹಳ ಬಡ ಕುಟುಂಬದಿಂದ ಬಂದಿದ್ದವರು. ಸರ್ಕಾರ ಇದರ ಬಗ್ಗೆ ಚಿಂತನೆ ಮಾಡುವುದು ಬಹಳ ಒಳ್ಳೆಯದು.

ಇನ್ನೊಬ್ಬ ಗೆಳೆಯ ಎಂದರೆ ಮಾನ್ಯ ಮಲ್ಲಿಕಾರ್ಜುನಪ್ಪನವರು. ವಿಧಾನ ಸಭೆಯಲ್ಲಿ ಮತ್ತು ವಿಧಾನ ಸಭೆಯಿಂದ ಹೊರಗಡೆ ಕೂಡ ಇವರು ಎಷ್ಟು ಚೆನ್ನಾಗಿ ಮಾತನಾಡುತ್ತಿದ್ದರು ಎಂದರೆ, ಅವರ ಒಂದೊಂದು ಮಾತೂ ಕೂಡ ಬಹಳ ಅರ್ಥಗರ್ಭಿತವಾಗಿರುತ್ತಿತ್ತು. ಅಷ್ಟೇ ಅಲ್ಲ ಆ ಮಾತುಗಳು ಬಹಳ ಹಾಸ್ಯಪೂರಿತವೂ ಆಗಿರುತ್ತಿದ್ದುವು. ಅವರ ಕೆಲವು ಮಾತುಗಳನ್ನು ನೆನಪು ಮಾಡಿಕೊಳ್ಳೋಣ ಎಂದರೆ ಅದಕ್ಕೆ ಈಗ ಸಮಯ ಇಲ್ಲ. ಇಂಥ ಇನ್ನೂ ಅನೇಕ ಜನ ಮಾನ್ಯ ಸದಸ್ಯರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ತಮ್ಮದೇ ಆದಂಥ ಅತ್ಯುನ್ನತ ಸ್ಥಾನಗಳನ್ನು ಹೊಂದಿದ್ದವರು. ಅಂಥವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ನಿಜವಾಗಿಯೂ ಒಂದು ರೀತಿಯಲ್ಲಿ ನಮ್ಮ ಕರ್ನಾಟಕ ತಬ್ಬಲಿಯಾಗಿದೆ ಎಂದರೆ ತಪ್ಪಾಗಲಾರದು. ಇವತ್ತು ಇಲ್ಲಿ ಮಾತನಾಡಿದಂಥ ಅನೇಕ ನಾಯಕರ ಮಾತಿಗೆ ನನ್ನ ಧ್ವನಿಯನ್ನೂ ಕೂಡಿಸಿ, ಈ ಎಲ್ಲಾ ಮೃತರ ಆತ್ಮಗಳಿಗೂ ಆ ಪರಮಾತ್ಮನು ಚಿರ ಶಾಂತಿಯನ್ನು ಕರುಣಿಸಲಿ ಮತ್ತು ಅವರ ಅಗಲಿಕೆಯಿಂದ ಅವರ ಕುಟುಂಬದವರಿಗೆ ಆಗಿರುವಂಥ ನೋವು, ದುಃಖವನ್ನು ಭರಿಸುವಂಥ ಶಕ್ತಿಯನ್ನು

ಆ ದೇವರು ಕರುಣಿಸಲೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

★ **ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-** ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದ ಸಂತಾಪ ಸೂಚಕ ನಿರ್ಣಯವನ್ನು ಅನುಮೋದಿಸುತ್ತಾ ಮಾಜಿ ರಾಷ್ಟ್ರಪತಿಗಳಾದ ನೀಲಂ ಸಂಜೀವರೆಡ್ಡಿಯವರು ಬಹಳ ಸಜ್ಜನ ವ್ಯಕ್ತಿಗಳು. ಆದರ್ಶವಾದ ವ್ಯಕ್ತಿ. ಆ ಒಬ್ಬ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡು ದೇಶಕ್ಕೆ ಬಹಳ ದೊಡ್ಡ ಹಾನಿಯಾಗಿದೆ. ಆದರೆ ಅವರ ಆದರ್ಶವನ್ನು ನಮ್ಮ ಮುಂದಿಟ್ಟು ನಾವು ಕೆಲಸ ಮಾಡಬೇಕಾಗಿದೆ. ಇವತ್ತು ಹಲವಾರು ಜನ ಸ್ನೇಹಿತರನ್ನು ನಾವು ಕಳೆದುಕೊಂಡಿದ್ದೇವೆ. ಅದರಲ್ಲೂ ಮುಖ್ಯವಾಗಿ ನಮ್ಮ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಪ್ರಾಮಾಣಿಕ, ಸಜ್ಜನ, ಹಾಗೂ ಒಳ್ಳೆಯ ಸಮಾಜ ಕಾರ್ಯಕರ್ತರಾದ ಯು.ಚಿತ್ತರಂಜನ್ ಮತ್ತು ಎಸ್.ಡಿ.ಗಾಂವಕರ್ ಇವರಿಬ್ಬರನ್ನು ಕಳೆದುಕೊಂಡು ಉತ್ತರ ಕನ್ನಡ ಜಿಲ್ಲೆ ಬಹಳ ಬಡವಾಗಿದೆ. ಯು.ಚಿತ್ತರಂಜನ್ ಅವರು ನನ್ನ ಬಹಳ ಆತ್ಮೀಯ ಸ್ನೇಹಿತರು. ರಾಜಕೀಯ ಭಿನ್ನಾಭಿಪ್ರಾಯ ಇದ್ದರೂ ಸಹ, ಅವರು ನಾವು ಕೂಡಿ ಕೆಲಸ ಮಾಡುವಾಗ 1930ರಲ್ಲಿ ನಾನು ಲೋಕಸಭಾ ಅಭ್ಯರ್ಥಿ ಇದ್ದಾಗ ನಾನು ಅವರ ಮನೆಯಲ್ಲಿ ಉಳಿಯುತ್ತಿದ್ದೆ. ಅವರು ಬಹಳ ಆತ್ಮೀಯ ಸ್ನೇಹಿತರು. ಬಹಳ ಸಜ್ಜನ ಪ್ರಾಮಾಣಿಕ ವ್ಯಕ್ತಿ. ಅವರ ಅಮಾನುಷ ಕೊಲೆಯನ್ನು ಎಷ್ಟೇ ತೀವ್ರ ಶಬ್ದಗಳಲ್ಲಿ ಖಂಡಿಸಿದರೂ ಕಡಿಮೆ ಎಂದು ನಾನು ಭಾವಿಸಿದ್ದೇನೆ. ಇದರಿಂದ ಕೆಲವು ಸಾರಿ ಭಯವಾಗುತ್ತದೆ. ರಾಜಕೀಯ ಜೀವನದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಸಂರಕ್ಷಣೆ ಇದೆಯೋ ಇಲ್ಲವೋ ಎಂದು ಭಯವಾಗುತ್ತದೆ. ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡಿದೆ. ಅವರು ಬಡವರ ಡಾಕ್ಟರು ಇದ್ದರು. ಬಡ ಜನರಿಗೆ ಸಾಕಷ್ಟು ಸಹಾಯ ಮಾಡಿದ್ದರು. ಸಮಾಜದಲ್ಲಿ ಸಾಕಷ್ಟು ಒಳ್ಳೆಯ ಹೆಸರು ಪಡೆದುಕೊಂಡರು. ಆದರೆ ಇವತ್ತು ಅವರು ನಮ್ಮ ಮುಂದೆ ಇಲ್ಲ. ನಾನು ಮಾಜಿ ಮುಖ್ಯ ಮಂತ್ರಿಗಳಲಿ ವಿನಂತಿ ಮಾಡಿದ್ದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀ ವಾಟಾಳ್ ನಾಗರಾಜು ಅವರು ಶಾಸಕರ ಬಗ್ಗೆ ಒಂದು ನಿಧಿ ಮಾಡಿ ಎಂದು ಸಲಹೆ ಕೊಟ್ಟರು. ನಾನು ಮಾಜಿ ಮುಖ್ಯ ಮಂತ್ರಿ ಶ್ರೀ ದೇವೇಗೌಡರು ಮತ್ತು ಇವತ್ತಿನ ಪ್ರಧಾನಿಗಳು ಹಾಗೂ ನಮ್ಮ ನಾಯಕರಾದ ಶ್ರೀ ಜೆ.ಹೆಚ್.ಪಟೇಲ್‌ರಿಗೆ, ಡಾ। ಚಿತ್ತರಂಜನ್ ಅವರ ಕುಟುಂಬಕ್ಕೆ ಆರ್ಥಿಕ ನೆರವು ಕೊಡಬೇಕೆಂದು ವಿನಂತಿ ಮಾಡಿದ್ದೇನೆ. ಏಕೆಂದರೆ ಅವರು ಯಾವ ಪ್ರಕಾರ ಜೀವನ ನಡೆಸುತ್ತಿದ್ದರು ಎಂಬುದು ನನಗೆ ಗೊತ್ತು. ಅದರ ಬಗ್ಗೆ ನನಗೆ ಸಾಕಷ್ಟು ಪರಿಚಯ ಇದೆ. ಹಾಗಾಗಿ ಅವರ ಆತ್ಮಕ್ಕೆ ದೇವರು ಶಾಂತಿ ಕೊಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಅದೇ ಪ್ರಕಾರ ಶ್ರೀ ಎಸ್.ಡಿ.ಗಾಂವಕರ್ ಅವರು ಸಹ ಹಿರಿಯ ರಾಜಕಾರಣಿಗಳು. ನಾನು ಇನ್ನೂ ರಾಜಕಾರಣಕ್ಕೆ ಬಂದಿರಲಿಲ್ಲ, ನಾನು ಕಾಲೇಜಿನಲ್ಲಿ ಕಲಿಯುತ್ತಿದ್ದೆ. ಆಗಿನಿಂದ ವರು ನನಗೆ ಪರಿಚಯ. ಹಲವಾರು ಬಾರಿ ಅವರ ಮಾರ್ಗದರ್ಶನದಿಂದ ನಾನು ಈ ಸ್ಥಾನಕ್ಕೆ ಬರುವುದಕ್ಕೆ ಸಾಧ್ಯವಾಗಿದೆ. ಅವರನ್ನು ಕಳೆದುಕೊಂಡು ನಾವು ಬಡವಾಗಿದ್ದೇವೆ. ಅದೇ ಪ್ರಕಾರ ಹಲವಾರು ಹಿರಿಯ ಸದಸ್ಯರು ಬಸವಯ್ಯನವರು ಇರಬಹುದು, ರಾಮಸ್ವಾಮಿಯವರು ಇರಬಹುದು, ಮಾಯಣ್ಣನವರು ಇರಬಹುದು, ವೀರಶೆಟ್ಟಿ ಕುಸನೂರು ಅವರು ಸಹಕಾರಿಗಳು ಮತ್ತು ಒಳ್ಳೆಯ ಸ್ನೇಹಿತರು. ಇವರೆಲ್ಲರ ಆತ್ಮಕ್ಕೆ ದೇವರು ಶಾಂತಿ ಕೊಡಲಿ ಎಂದು ಹೇಳಿ ತಮ್ಮ ಸಂತಾಪ ಸೂಚಕ ನಿರ್ಣಯಕ್ಕೆ ಅನುಮೋದಿಸಿ ನನ್ನ ಮಾತು ಮುಗಿಸುತ್ತೇನೆ.

★ **ಡಾ॥ ಎಂ.ಪಿ.ಕರ್ಕಿ(ಕುಮಟಾ):-** ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರತಕ್ಕ ಸಂತಾಪ ಸೂಚಕ ನಿರ್ಣಯವನ್ನು ಅನುಮೋದಿಸುತ್ತಾ ನನಗೆ ತೀರಾ ಹತ್ತಿರವಾಗಿರತಕ್ಕ ಮತ್ತು ಗೊತ್ತಿರತಕ್ಕ ಒಂದೆರಡು ವ್ಯಕ್ತಿಗಳ ಬಗ್ಗೆ ಎರಡು ಮಾತುಗಳನ್ನು ಆಡಲಿಕ್ಕೆ ಬಯಸುತ್ತೇನೆ. ಡಾ॥ ಚಿತ್ತರಂಜನ್ ಅವರು ನನ್ನ ಹತ್ತಿರದ ಕ್ಷೇತ್ರವಾದ ಭಟ್ಕಳದಿಂದ ಬಂದಿರತಕ್ಕವರು. ಅವರನ್ನು ರಾಜಕೀಯಕ್ಕೆ ಪ್ರಥಮ ಬಾರಿಗೆ ತಂದಂತಹ ವ್ಯಕ್ತಿ ನಾನು. ಭಾರತೀಯ ಜನಸಂಘದ ಸದಸ್ಯರನ್ನಾಗಿ ಮೊದಲ ಸಲ ಅವರನ್ನು ಮಾಡಿದಂತಹ ವ್ಯಕ್ತಿ ನಾನು. ಅವರನ್ನು ನೋಡಿದ ಹಾಗೆ ಒಂದೆರಡು ವಿಚಾರಗಳನ್ನು ಹೇಳಬೇಕೆನಿಸುತ್ತದೆ. ತಾವು ಅನೇಕರು ಹೇಳಿದಂತೆ ಅವರದ್ದು ಅಸ್ವಾಭಾವಿಕ ಸಾವು. ಈ ರಾಜ್ಯದಲ್ಲಿ ಕಂಡು ಕೇಳರಿಯದಂತಹ ಸಾವು. ಬಹುತೇಕ ಶಾಸಕರ ಕೊಲೆ ನಮ್ಮ ರಾಜ್ಯದಲ್ಲಿ ಪ್ರಥಮ ಅನ್ನಿಸುತ್ತದೆ. ಇಂಥದ್ದು ಹಿಂದೆಂದೂ ಆಗಿರಲಿಲ್ಲ . ಮುಂದೆಯೂ ಕೂಡ ಆಗಬಾರದು. ಈ ಸಲ ಶಾಸಕರಾಗಿ ಆರಿಸಿ ಬಂದ ಮೇಲೆ, ತಾವು ಶಾಸಕರ ಜವಾಬ್ದಾರಿಯನ್ನು ಯಾವ ರೀತಿ ನಿರ್ವಹಿಸಬೇಕು, ಸಿಕ್ಕಂಥ ಅವಕಾಶಗಳನ್ನು ಯಾವ ರೀತಿ ಬಳಸಿಕೊಳ್ಳಬೇಕು, ಯಾವ ರೀತಿ ಹೆಚ್ಚಿನ ಬುದ್ಧಿವಂತಿಕೆ ತೋರಿಸಬೇಕು ಎಂಬುದರ ಬಗ್ಗೆ ಸದಾಕಾಲ ಅಭ್ಯಾಸ ಮಾಡಿ ಅದನ್ನು ತಿರುವಿ ಹಾಕಿ ಶಾಸನಸಭೆಯಲ್ಲಿ ಬಂದು ಮಾತನಾಡತಕ್ಕ ವ್ಯಕ್ತಿ ಡಾ। ಚಿತ್ತರಂಜನ್. ಅವರಿಂದ ನಾವು ಇನ್ನೂ ಹೆಚ್ಚು ಅಪೇಕ್ಷೆ ಆಸೆಯನ್ನು ಇಟ್ಟುಕೊಂಡಿದ್ದೆವು. ಅವರ ಸ್ವಾಭಾವ ಯಾವಾಗಲೂ ಮುಗುಳ್ನಗುತ್ತಾ ಇರತಕ್ಕದ್ದು. ಯಾರ ಮೇಲೆ ಕೂಡ ಸಿಟ್ಟಾದುದನ್ನು ನಾನು ಕಂಡಿರಲಿಲ್ಲ. ನಮ್ಮ ಬಿ.ಜೆ.ಪಿ.ಯಲ್ಲಿ ಕೂಡ ಯಾರ ಮೇಲೂ ಸಿಟ್ಟು ಮಾಡಿಕೊಂಡದ್ದು ನಾನು ಕಂಡಿರಲಿಲ್ಲ. ಎಂತಹ ಕಠಿಣ ಪ್ರಸಂಗದಲ್ಲಿಯೂ ಕೂಡ ಒಂದು ಬಿರು ನುಡಿ ಆಡದೆ ಅವೆಲ್ಲವನ್ನು ತಾನು ನುಂಗಿಕೊಳ್ಳುತ್ತಾ ಇನ್ವೊಲ್ವ್ ಆಗಿ ಕೆಲಸ ಮಾಡಿರತಕ್ಕ ಜೀವ ಅವರದ್ದು. ಹಾಗೆ ಪ್ರಾಮಾಣಿಕವಾಗಿ ಸಾಮಾಜಿಕ ಸೇವೆ ಸಲ್ಲಿಸಿರತಕ್ಕ ಜನ ಅವರು. ನಮ್ಮ ಶಾಸಕ ಮಿತ್ರರು ಹೇಳಿದಂತೆ 1964ರಲ್ಲಿ ಉಡುಪಿಯಿಂದ ಭಟ್ಕಳಕ್ಕೆ ಬಂದು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದವರು. ಈ ವೃತ್ತಿ ಜೀವನದಲ್ಲಿ ಕೇವಲ ಒಂದೆರಡು ವರ್ಷಗಳಲ್ಲಿ ಜಿಲ್ಲೆಯ ಎಲ್ಲಾ ಹಿರಿಯ ಡಾಕ್ಟರುಗಳ ಸಾಲಿನಲ್ಲಿ ಬಂದಿರತಕ್ಕ ಜನ. ತಮ್ಮ ರೋಗಿಗಳನ್ನು ಮಕ್ಕಳಂತೆ ನೋಡಿಕೊಂಡ ವೈದ್ಯಕೀಯ ವೃತ್ತಿಯಾಗಿ ನಡೆಸಿರತಕ್ಕಂಥವರು. ಅದನ್ನು ವ್ಯಾಪಾರವನ್ನಾಗಿಸಲಿಲ್ಲ. ಈ ಸಂದರ್ಭದಲ್ಲಿ ಅಂಥ ಜನ ವಿರಳ ಎಂದು ಹೇಳತಕ್ಕ ಮಾತನ್ನು ನಾನು ವೈದ್ಯನಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾರ್ವಜನಿಕ ಜೀವನದಲ್ಲಿ, ಧಾರ್ಮಿಕ ರಂಗದಲ್ಲಿ, ಶೈಕ್ಷಣಿಕ ರಂಗದಲ್ಲಿ, ಬ್ಯಾಂಕು, ಕೋ-ಆಪರೇಟಿವ್‌ಗಳ ವ್ಯವಹಾರದಲ್ಲಿ ಅನೇಕ ಸ್ಥಾನಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿ ಒಂದು ಕಪ್ಪು ಚುಕ್ಕೆ ಕಾಣದಂಥ ಜೀವನ ನಡೆಸಿದಂಥ ಜನ ಅವರು. ನಮ್ಮ ನಾಯಕರು ಒಂದು ವಿಷಯ ಹೇಳಿದರು. ಅದರಂತೆ ಇನ್ನೆರಡು ಶಾಸಕ ಮಿತ್ರರು ಅವರಿಗೆ ಆಗಿರತಕ್ಕ ಹಾನಿಯ ಬಗ್ಗೆ ಮಾತನಾಡಿದರು. ನಾನು ಈ ಸಭೆಯ ಹಾಗೂ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಒಂದು ವಿಷಯದ ಕಡೆಗೆ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಭಾರತದ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಬಿಡಿಗಾಸೂ ಇಲ್ಲದೆ ಮರಣ ಹೊಂದಿದರು. ಅವರು ಸತ್ತ ಮೇಲೆ ಜನತೆಗೆ ಗೊತ್ತಾಯಿತು. ಆಗ ರಾಷ್ಟ್ರೀಯ ರಾಷ್ಟ್ರೀಯ ಸರ್ಕಾರ ಅವರ ನೆರವಿಗೆ ಬಂದಂಥ ವಿಚಾರವನ್ನು ನಾನು ಈ ಸಭೆಯ ಮೂಲಕ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಈ ಸಭೆ ಕೂಡ ಅಂಥ ಪ್ರಾಮಾಣಿಕ ನಿಸ್ವಾರ್ಥ ಶಾಸಕರು ತಾವು ಏನು ಮಾಡದೆ ತಮ್ಮ ಸಂಸಾರಕ್ಕೆ

ಏನು ಬಿಟ್ಟು ಹೋಗದೆ ಇರತಕ್ಕ ಸಂದರ್ಭದಲ್ಲಿ ನೆರವಿಗೆ ಬರತಕ್ಕ ಅವಶ್ಯಕತೆ ಇದೆ. ಅದಕ್ಕೆ ಬಹಳ ದೊಡ್ಡ ಯೋಜನೆಯನ್ನೇನು ಹಾಕಿಕೊಳ್ಳದೆ ಕೂಡಲೇ ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತಿಯಾಗಬೇಕೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಈ ಕೊಲೆಯ ಹಿಂದಿರತಕ್ಕ ವಾತಾವರಣವನ್ನು ನಾನು ಈ ಸಭೆಯ ಮೂಲಕ.....

ಅಧ್ಯಕ್ಷರು:- ನೀವು ಪ್ರಸ್ತಾಪ ಮಾಡುವುದು ಬೇಡ ಅನ್ನುವುದಿಲ್ಲ. ಈಗ ನಿಮ್ಮ ಲೀಡರ್ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇನ್ನೊಂದು ಅವಕಾಶ ತೆಗೆದುಕೊಂಡು ನೀವು ಪ್ರಸ್ತಾಪ ಮಾಡಿ.

★ **ಡಾ। ಎಂ.ಪಿ.ಕರ್ಕಿ:-** ಅದನ್ನು ನಾನು ಹೇಳುತ್ತಿಲ್ಲ. ಯಾರಿಗೂ ಏನೂ ನೋವಾಗದಂತೆ ನಡೆದುಕೊಳ್ಳಬೇಕೆಂಬ ವಿಚಾರದಲ್ಲಿ ನಾನು ಜಾಸ್ತಿ ಮಾತನಾಡದೆ, ಸಭೆಗೆ ಅಪಚಾರವಾಗದಂತೆ ಮಾತನಾಡುತ್ತೇನೆ. ಅವರ ಕೊಲೆಯ ಹಿಂದಿನ ಸಂಚನ್ನು ಬಯಲು ಮಾಡುವುದಕ್ಕೆ ಸರ್ಕಾರ ಈಗಾಗಲೇ ಸಿ.ಬಿ.ಐ. ನೇಮಿಸಿದೆ. ಅದಕ್ಕಿಂತ ಹೆಚ್ಚಾಗಿ ಜಿಲ್ಲೆಯಲ್ಲಿ ಶಾಂತಿಯನ್ನು ಕಾಪಾಡತಕ್ಕ ರೀತಿಯಲ್ಲಿ ಮತ್ತು ಇಂಥ ಒಂದು ಪ್ರವೃತ್ತಿ ಆಗದಂತೆ ಸರ್ಕಾರ ಕೆಲಸ ಮಾಡಬೇಕಾಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೋಲಿಸರು ಸರಿಯಾದ ಹಾದಿಯಲ್ಲಿ ಹೋಗುತ್ತಿದ್ದಾರೆ. ಆ ಸರಿಯಾದ ಹಾದಿಯಲ್ಲಿ ಹೋಗತಕ್ಕಂಥ ಪ್ರಕ್ರಿಯೆ ಮುಂದುವರೆಯಬೇಕು. ಪೋಲಿಸರು ಮಾಡತಕ್ಕ ಕೆಲಸಕ್ಕೆ ಶ್ಲಾಘನೆಯನ್ನು ಕೂಡ ಈ ಮೂಲಕ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅಂಥ ಕೆಲಸವನ್ನು ಸರ್ಕಾರ ಮುಂದುವರೆಸಿಕೊಂಡು ಹೋಗಬೇಕು. ಆಗಮಾತ್ರ ಭಟ್ಕಳದಲ್ಲಿ, ಜಿಲ್ಲೆಯನ್ನು ಶಾಂತಿ ನೆಲೆಗೊಂಡೀತು. ಹಾಗೂ ಇಂಥ ಕ್ರಿಯೆ ತಿರುಗಿ ಪ್ರಾರಂಭವಾಗದೇ ಇರಬಹುದು ಎಂಬ ಆಶಯವನ್ನು ವ್ಯಕ್ತಪಡಿಸಿ ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ರಾಜಕಾರಣದಲ್ಲಿ ಅನೇಕ ದಶಕಗಳ ಕಾಲ ರಾಜಕೀಯದಲ್ಲಿದ್ದು ಅನೇಕ ಸ್ಥಾನಗಳನ್ನು ಹೊಂದಿ ಸದ್ಯದಲ್ಲಿಯೇ ನಮ್ಮನ್ನಗಲಿದ ಎಸ್.ಡಿ.ಗಾಂವಕರ್ ಅವರ ಬಗ್ಗೆ ನನ್ನ ಶ್ರದ್ಧಾಂಜಲಿಯನ್ನರ್ಪಿಸಿ ಅನೇಕ ಗಣ್ಯರು ಈ ಸಂದರ್ಭದಲ್ಲಿ ತೀರಿಕೊಂಡಿರುವ ಸಂದರ್ಭದಲ್ಲಿ ಮಾನ್ಯ ಮಾಜಿ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರು, ಮಾಜಿ ಸದಸ್ಯ ಶ್ರೀ ರೋಡ್ರಿಗಸ್ ಅವರು, ಕೆ.ಜೆ.ರಾವು ಸ್ವಾಮಿಯವರು, ಬಸವಯ್ಯನವರು, ಶ್ರೀ ಡಿ.ಟಿ.ಮಾಯಣ್ಣನವರು, ವೆಂಕಟಗಿರಿಯಪ್ಪನವರು, ಬಿ.ಮುನಿಯಪ್ಪನವರು, ಎ.ಎಂ. ಬಸವೇಗೌಡರು, ಎಚ್.ಎಂ.ಮಲ್ಲಿಕಾರ್ಜುನಪ್ಪನವರು, ವೀರಶೆಟ್ಟಿ ಕುಸನೂರ್‌ರವರು, ಇವರೆಲ್ಲರ ಮರಣಕ್ಕೆ ನನ್ನ ಸಂತಾಪವನ್ನು ತಮ್ಮೊಂದಿಗೆ ದನಿಗೂಡಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಪರಮಾತ್ಮ ನೀಡಲಿ ಎಂಬ ಸದಾಶಯವನ್ನು ವ್ಯಕ್ತಪಡಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

★ **ಬಸವರಾಜಪಾಟೀಲ್ ಅಟ್ಟೂರು (ಬಸವಕಲ್ಯಾಣ):-** ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವಂಥ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ಈಗಾಗಲೇ ಹಲವಾರು ಜನ ಮಾನ್ಯ ಶಾಸಕರು ದಿವಂಗತರ ಬಗ್ಗೆ ಹಲವಾರು ವಿಚಾರಗಳನ್ನು ಹೇಳಿದ್ದಾರೆ. ನಾನು ಮೊದಲನೆಯದಾಗಿ ನೀಲಂ ಸಂಜೀವರೆಡ್ಡಿಯವರ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಅವರು ಅಪ್ಪಟ ಗಾಂಧಿವಾದಿಗಳಾಗಿದ್ದರು. ಹಿಂದಿನ ಒಂದು ಕಾಲದಲ್ಲಿ ಅವರನ್ನು ನೋಡಿದಾಗ, ಅವರು, ನಿಜಲಿಂಗಪ್ಪನವರು, ಎಸ್.ಕೆ.ಪಾಟೀಲ್ ಅವರು, ಮತ್ತೆ ರೋಡ್ರಿಗಸ್ ಅವರು ಮತ್ತು ಹಲವಾರು ಜನ ಗಣ್ಯ ವ್ಯಕ್ತಿಗಳು ಆಗಿದ್ದಂಥವರು. ಸಂಜೀವರೆಡ್ಡಿಯವರು ಕನ್ನಡ ನಾಡಿನ ರಾಜಧಾನಿಯಲ್ಲಿದ್ದಂಥವರು.

ಅಂಥವರ ನಿಧನನಿಂದ ನಮಗೆ ಅಪಾರವಾದಂಥ ದುಃಖವಾಗಿದೆ. ಅಂಥ ಒಬ್ಬ ಮಹಾನ್ ವ್ಯಕ್ತಿ ರಾಷ್ಟ್ರಪತಿ ಸ್ಥಾನಕ್ಕೆ ಹೋಗಿ ಅವರು ಕರ್ನಾಟಕದ ರಾಜಧಾನಿಯಲ್ಲಿ ಇಲ್ಲೇ ಇದ್ದುಕೊಂಡು ವಸತಿ ಮಾಡುವಂಥ ಒಂದು ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದರು. ಅವರ ಇಚ್ಛೆ ನಮ್ಮ ಕನ್ನಡ ನಾಡಿನ ಜನರಿಗೆ ಒಂದು ಹೆಮ್ಮೆ ಎಂಬ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಅಂಥ ಮಹಾನ್ ವ್ಯಕ್ತಿಗಳ ಬಗ್ಗೆ ಈಗಾಗಲೇ ನಮ್ಮ ಹಲವಾರು ಮಿತ್ರರು ಕೆಲವು ಸೂಚನೆಗಳನ್ನು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವ ರೀತಿಯಾಗಿ ವಿಧಾನ ಸೌಧದ ಮುಂದೆ ಹಲವಾರು ಜನ ಮಹನೀಯರ ಪುತ್ಥಳಿಯನ್ನು ಅನಾವರಣ ಮಾಡುತ್ತಿದ್ದೀರಿ ಅದೇ ಪ್ರಕಾರವಾಗಿ ನೀಲಂ ಸಂಜೀವರೆಡ್ಡಿಯವರ ಒಂದು ಪುತ್ಥಳಿಯನ್ನು ಅನಾವರಣ ಮಾಡುವ ಮುಖಾಂತರವಾಗಿ ಅವರಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸಬೇಕು ಎಂದು ನಾನು ನಮ್ಮ ಸರ್ಕಾರಕ್ಕೆ ಕೇಳಿಕೊಳ್ಳಬಯಸುತ್ತೇನೆ. ಮತ್ತೆ ಎರಡನೆಯದಾಗಿ ಹಲವಾರು ಜನ ಮಹನೀಯರು ಅಗಲಿಹೋಗಿದ್ದಾರೆ. ನಮ್ಮ ರಾಜ್ಯಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಂಥವರಲ್ಲ ಪ್ರಮುಖರಾದವರೆಂದರೆ ಶ್ರೀಮಾನ್ ವೀರಶೆಟ್ಟಿ ಕುಸನೂರ್ ಅವರು. ಅವರು ಮೂಲತಃ ನಮ್ಮ ಬೀದರ್ ಜಿಲ್ಲೆಯವರು. ಅವರು ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಕೆಲಸವನ್ನು ಮಾಡಿದಂಥವರು. ರಾಜ್ಯದ ಸಹಕಾರ ಇಲಾಖೆಯ ಮಂತ್ರಿಗಳಾಗಿ, ಜಿಲ್ಲಾ ಕೇಂದ್ರ ಬ್ಯಾಂಕಿನ ಅಧ್ಯಕ್ಷರಾಗಿ, ರಾಜ್ಯದ ರಾಷ್ಟ್ರದ ಜಾಗತಿಕ ಬ್ಯಾಂಕಿನ ಉಪಾಧ್ಯಕ್ಷರಾಗಿ ಮತ್ತು ಹಲವಾರು ಸಂಘ ಸಂಸ್ಥೆಗಳನ್ನ ಕಟ್ಟಿಕೊಂಡು ಹೋರಾಟ ಮಾಡಿದ್ದಂಥ ಮಹಾನ್ ವ್ಯಕ್ತಿಗಳಾಗಿದ್ದರು. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ನಿಕಟವರ್ತಿಯಾಗಿ ಅವರು ಕೆಲಸ ಮಾಡುತ್ತಿದ್ದರು. ಅವರು ಅಪ್ಪಟ ಕಾಂಗ್ರೆಸ್ ವಾದಿಗಳಾಗಿದ್ದಂಥವರಾದರೂ ನಮ್ಮ ರಾಜ್ಯದ ಸಲುವಾಗಿ ವಿಶೇಷವಾಗಿ ಬೀದರ್ ಜಿಲ್ಲೆಯ ಬಗ್ಗೆ ವಿಶೇಷವಾಗಿ ಬಹಳಷ್ಟು ಪ್ರಗತಿಪರವಾದಂಥ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ನಮ್ಮ ಬೀದರ್ ಜಿಲ್ಲೆಯ ಕೃಷಿ ಬ್ಯಾಂಕ್ ಒಂದು ಉನ್ನತವಾದ ಸ್ಥಾನಕ್ಕೆ ಬರಬೇಕಾದರೆ ಅವರು ಕಾರಣೀಭೂತರಾಗಿದ್ದರು ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಮತ್ತು ಅವರು ನಮ್ಮ ರಾಷ್ಟ್ರದ ಪ್ರಮುಖ ಸಹಕಾರಿ ಕ್ಷೇತ್ರದ ಮುಖಂಡರ ಪೈಕಿಯೂ ಒಬ್ಬರಾಗಿದ್ದರು. ಅವರು ಹಾರ್ಟ್ ಅಟ್ಯಾಕ್ ಆಗಿ ಅಕಾಲಿಕ ಮರಣಕ್ಕೆ ತುತ್ತಾದರು. ನಮಗೆ ಅದು ಗೊತ್ತೆ ಆಗಲಿಲ್ಲ. ನಮ್ಮ ಮನಸ್ಸಿಗೆ ಬಹಳ ನೋವಾಯಿತು. ಅಂಥ ಮಹನೀಯರು ಹಲವಾರ ಜನ ಅಗಲಿ ಹೋಗಿದ್ದಾರೆ. ಚಿತ್ತರಂಜನ್ ಅವರು, ಬಸವೇಗೌಡರು, ಮಲ್ಲಿಕಾರ್ಜುನಪ್ಪನವರು, ಮಾಯಣ್ಣನವರು, ವೆಂಕಟಗಿರಿಯಪ್ಪನವರು, ಹಲವಾರು ಜನ ಮಾನ್ಯ ಶಾಸಕರು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರಿಗೆ ನಾವು ನಮ್ಮ ಶ್ರದ್ಧಾಂಜಲಿಯನ್ನರ್ಪಿಸಿ ತಾವು ತಂದಿರುವಂಥ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸಂಪೂರ್ಣವಾಗಿ ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಅಗಲಿದ ಎಲ್ಲಾ ಮಹನೀಯರುಗಳ ಗೌರವಾರ್ಥ ಮಾನ್ಯ ಶಾಸಕರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆ ಎದ್ದು ನಿಂತು ಮೃತರ ಗೌರವರ್ಥ ಒಂದು ನಿಮಿಷ ಮೌನವನ್ನಾಚರಿಸಿ ಶ್ರದ್ಧಾಂಜಲಿಯನ್ನರ್ಪಿಸಿತು)

ಅಧ್ಯಕ್ಷರು:- ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸಭೆಯನ್ನು ಮುಂದೂಡಿ ಸಭೆಯು ಪುನಃ

ನಾಳೆ ಬೆಳಿಗ್ಗೆ 9- 30 ಕ್ಕೆ ಸಭೆ ಸಮಾವೇಶಗೊಳ್ಳುತ್ತದೆ.

(ಸಭೆಯನ್ನು 12 ಗಂಟೆ 35 ನಿಮಿಷಕ್ಕೆ ಮುಂದೂಡಲಾಯಿತು. ಮತ್ತೆ ದಿನಾಂಕ 5- 7- 1996ರಂದು ಬೆಳಿಗ್ಗೆ 9- 30ಕ್ಕೆ ಸಭೆ ಸಮಾವೇಶಗೊಳ್ಳಬೇಕೆಂದು ನಿರ್ಧರಿಸಲಾಯಿತು)

★ **ಈ ಚಿಹ್ನೆಯು ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸುವುದಿಲ್ಲವೆಂದು ಸೂಚಿಸುತ್ತದೆ.**

ಕರ್ನಾಟಕ ವಿಧಾನ ಸಭೆ

ಶುಕ್ರವಾರ 5ನೇ ಜುಲೈ 1996 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.40 ಗಂಟೆಗೆ

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.